ಅಪರಂಜಿ

ಜುಲೈ
1994
ತಿಳಿನಗೆಯ ಕಾರಂಜಿ



* ಪ್ರಕಾಶ್
* ಕೆ.ವಿ. ಶ್ರೀನಾಥ
* ಶಿವು
* ನಂದಿನಿ ಕಾಪಡಿ
* ಓಂ ಪ್ರಕಾಶ್
* ಕೃಷ್ಣ ಸುಬ್ಬರಾವ್
* ಕೇಸ್ಟ
* ಹಂಸ
* ಎಚ್. ಗೋಪಾಲಕೃಷ್ಣ
* ಶ್ರೀಮತಿ ಅರುಣಾ ಆರ್. ಕಾರಂತ

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೧ ಜುಲೈ ೧೯೯೪ ಸಂಚಿಕೆ ೧೦

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10 ಗಂಟೆಯುವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

ಅಪರಂಜಿ
(ತಿಳಿನಗೆಯ ಕಾರಂಜಿ)

ಸಂಪುಟ ೧೧ | **ಜುಲೈ ೧೯೯೪** | **ಸಂಚಿಕೆ ೧೦**

ಆನಂದಮಯೋಽಭ್ಯಾಸಾತ್

ಬ್ರಹ್ಮಸೂತ್ರಗಳು-೧೨

ಹಾಡಿದ್ದೇ ಹಾಡೋ ಕಿಸುಬಾಯಿಯುವನೇ ಎಂದು ಒಂದು ಗಾದೆಯಿದೆ.

ಹಾಗೇ ಲೆಕ್ಕಹಾಕಿಕೊಳ್ಳಿರಿ, ಶಾಂತಿ, ಸತ್ಯ ಅಹಿಂಸೆ ಸಮಾನತೆ, ಮಹಾತಾ ಗಾಂಧಿ ಎಂದು ಹಲವು ವರ್ಷ ಗಿಣಿಪಾಠ ಹೇಳುತ್ತಿದ್ದರು.

ಭಾಯಿ ಭಾಯಿ ಎಂದು ಬಾಯಿಬಿಟ್ಟರು. ವಿಶ್ವದಲ್ಲಿ ನಾಯಕತ್ವಗಳಿಸಲು, ಕಾಶ್ಮೀರವನ್ನು ವಿಶ್ವಸಂಸ್ಥೆಗೊಯ್ದರು. ಏನಾಯಿತು ?

ಪರಮ ಪವಿತ್ರವೆಂದು ನಾವು ನಂಬಬೇಕೆಂದು ಬಯಸುವ ದಾಖಲೆಯನು ಎಷ್ಟೋ ಬಾರಿ ತಮ್ಮ ಮೂಗಿನ ನೇರಕ್ಕೆ ತಿದ್ದಿದರು.

ಅನೇಕ ಕಡೆ ಸಮಸ್ಯೆಗಳು ಹುಟ್ಟಿದವು. (ಹುಟ್ಟಿಸಿದರೋ, ಹುಟ್ಟಿದವೋ ಭಾರತ ಮಾತೆ ಬಲ್ಲಳು). ತಾತ್ಕಾಲಿಕ ಉಪಶಮನ ಕಂಡರೂ ಬೇರೆ ಸಮಸ್ಯೆಗಳನ್ನು ಹುಟ್ಟಿಸಿ ಹಿಂದಿನದನ್ನು ಮರೆಸಿದರು.

ಕೋಮು ಸಮಸ್ಯೆಯ ಉರಿಮಂಡಲದ ಪರಿಹಾರಕ್ಕಾಗಿ ಜಾತಿಯ ಕೊಳಕು ಮಂಡಲವನ್ನು ಬೆಂಬಲಿಸಿದರು. ಮುಂದೆ ಇನ್ನೇನು ಸೋಗೋ !

ಭ್ರಷ್ಟಾಚಾರ, ಆಡಳಿತ ಸ್ಥಗಿತಗೊಳ್ಳುವಿಕೆ ಇವೆಲ್ಲಾ ಅಂತರರಾಷ್ಟ್ರೀಯ ಫೆನಾಮಿನಾ ಎಂದು ಬಿಟ್ಟರು.

ಇವೆಲ್ಲಿ ಏತಕ್ಕಾಗಿ ? ತಮ್ಮ ಖುಷಿಗಾಗಿ ತಾನೇ. ತನಗೆ ಖುಷಿಯಾಗುವುದಕ್ಕೆಂದೇ ಜೀವಿ ಹೀಗೆಲ್ಲಾ ಮಾಡುತ್ತಾನೆ. ಆನಂದರಿಂದ ಖುಷಿ ಹುಟ್ಟುತ್ತದೆ. ಹುಟ್ಟಿದ್ದೆಲ್ಲಾ ನಾಶವಾಗುತ್ತದೆ.

ಅದಕ್ಕೇ ವ್ಯಾಸರು ಹೇಳಿದ್ದು, ಬ್ರಹ್ಮವು ಆನಂದ ಸ್ವರೂಪ, ಆನಂದ ಮಯವು ಅರ್ತೆ.



ಪ್ರಕಾಶ್

ಕಾನ್ಶಿರಾಂ ಹೇಳಿಕೆಗೆ ಅಜ್ಞಾನ ಕಾರಣ

—ಶೀರ್ಷಿಕೆ

ಈ ರೀತಿಯ ಜ್ಞಾನೋದಯ ಹೆಚ್ಚಾಗಲಿ !

*   *   *   *

ಅಂಬರೀಷ್‌ಗೆ ರಾಜಕೀಯ ಸೇರಲು ಆಹ್ವಾನ

—ಸುದ್ದಿ

ಪಾಪ ! !

*   *   *

ನ್ಯಾಯಾಧೀಶರು ಅತಿಥಿಗೃಹದಲ್ಲಿ ಇದ್ದುದರಿಂದ ರಾಜ್ಯಪಾಲರಿಗೆ ವಸತಿ ಸಿಕ್ಕಲಿಲ್ಲ

—ಮೈಸೂರುವರದಿ

ನ್ಯಾಯಾಂಗ ಕಾರ್ಯಾಂಗಕ್ಕಿಂತ ಬಲಶಾಲಿ ! !

*   *   *   *

ಹಿಂದಿ ಹೇರಿಕೆ ಇಲ್ಲ; ಕೇಂದ್ರ ಭರವಸೆ

—ಸುದ್ದಿ

ಹೇಳಿಕೆ ಯಾವ ಭಾಷೆಯಲ್ಲಿ ?

*   *   *

ಬಸವೇಶ್ವರ ತತ್ವಗಳ ಶ್ಲಾಘನೆ

—ಶ್ರೀ ಬಂಗಾರಪ್ಪನವರಿಂದ

ಬಸವೇಶ್ವರರ ಆತ್ಮ ಚಕಿತಗೊಂಡಿತಂತೆ ! !

* * *

ಪ್ರವಾಹ ಪರಿಹಾರಕ್ಕೆ ಕರ್ನಾಟಕದಿಂದ ಕೇಂದ್ರಕ್ಕೆ ಮನವಿ ಬಂದಿಲ್ಲ

—ಸುದ್ದಿ

ವೀಕ್ಷಕರ ಪ್ರವಾಹವೋ ? ?

* * * *

ಖಾಸಗೀ ಜಮೀನಲ್ಲಿ ಅರಣ್ಯ

—ಸಲಹೆ

ಅರಣ್ಯ ರೋದನ ಅಂದರೆ ಇದು ! !

* * *

ರೌಡಿಗಳ ಯಾದಿ ಪರಿಷ್ಕರಣೆ

—ಪತ್ರಿಕೆ

ಮೂರನೇ ಲಿಸ್ಟ್ ಯಾವಾಗ ಬರುತ್ತೋ ? ? !

* * *

ರಾಯರ ಅಮೆರಿಕ ಪ್ರವಾಸದ ಸಿಹಿ,
ಸಕ್ಕರೆ–ವಿವಾದದ ಕಹಿಯಲ್ಲಿ ಅಂತ್ಯ ! !

* * * *

5

ಬೋರನ ಅಧಿಕ ಪ್ರಸಂಗ

ಇರಾಕ್ಯೊಂಡ್ ಸೂರು

ಕೆ. ವಿ. ಶ್ರೀನಾಥ

ಹಳ್ಳಿ ಬುಟ್ಟು ಪ್ಯಾಟಾಗ್ ಬಂದ್ ವಸ್ರುದಾಗ್ ನಾನ್ ಬೋ ಅನ್‌ಬವ್ರುಸ್ದ್ ಬುದ್ದಿ......ನಾನ್ ಅಳ್ಳೀ ಬುಟ್ ಪ್ಯಾಟೇಗ್ ಬಂದವ್ನ ಅಂತ ಏಳಿದ್ದು ಜ್ಞಾಪ್ತಿ ಐತೆ ತಾನೆ...ಇಲ್ಲ ಅಂದ್ರು...! ಅದೆಂಗಿರ್ತಾದೆ ಬುಡಿ ಮತ್ಗೆ...! ಯಾಕ್ ಏಳಕ್ ಬಂದೆ ಅಂದ್ರೆ..."ಅಳ್ಳಿ ಬುಟ್ಟೋನು ದಿಳ್ಳೀನಾಗ್ ಮೆರ್ದ" ಅಂತ ನಂ ಸಾನುಬೋಗ್ರು ಏಳಿದ್ದು ಕೇಳಿದ್ದು ಮನಸ್ನಾಗ ನಿಂತ್ಕೈತೆ...ಏನೋ ಎಂಗೋ ಅಂತಾನೇ ಪ್ಯಾಟೆವಳ್ಗೆ ಕಾಲ್‌ಮಡುಗ್ದೆ...ಯಾವನ್ಯಾವನೋ, ಎಲ್ಲಾ ಕಡೆಯಿಂದ ಇಲ್ಲಿಗ್ ಬಂದು ಬದುಕ್ ನಡುಸವ್ನೆ...ಅಂತಾದ್ರಾಗೆ ನಂದೇನು ಅಂತ ರೈಲ್‌ನಿಂದ ಇಳ್ದೋನು ಟೇಸನ್ನಾಗ್ ರಾತ್ರಿ ಕಳ್ದೆ...ರೈಲ್‌ಟೇಸರ್ ಅಲ್ರೀ...ಪ್ರೋಲೀಸ್!ಟೇಸನ್ನು ಯಾಕಲ್ಲಾ ಬೋರ...ಏನಾಯ್ತು ? ಅಂತ ಕೇಳ್ತೀರ...ರಾತ್ರಿ ಪ್ಯಾಟ್ಯಾಗ್ ಸಡ್ಕೋಡು ಸಾಕಾಯ್ತಪ್ಪೋ ಅಂತ ಅಂದ್ಕೊಂಡು ಬಂದ್ ಅಂಗ್ಡಿ ತಾವ ಬುತ್ತಿ ಬಿಚ್ಚಿ ಇಟ್ಟು ತಿಂದು ಅಂಗೆ ಮಲಗ್‌ಕಂಡೆ. ಯಾವ್ದೋ ಟೇಮ್ನಾಗೆ ಪೋಲಿಸ್ನೋರು ಬಂದ್ರು ಏನು? ಎತ್ತ? ಯಾರ್ನೀನು?" ಅಂತ ಕೇಳ್ದ್ರು...ಅದ್ಕೆ ನಾನು 'ಇಂಗೆ,' 'ಇಂಗೆ' ಅಂತ ಏಳ್ದೆ...ಅವ್ರು ಅದ್ಕೆ "ಸರಿ ಅಂಗಾರ, ನಂ ಮನ್ಯಾಗ್ ಬಂದಿರು." ಅಂತ ಏಳಿ ಆ ರಾತ್ರಿ ಟೇಸನ್ನಾಗೇ ಮಡಿಕ್ಕಂಡ್ರು... ಮಾರ್ನೆ ದಿನ ಒರಕ್ ಬರೋವಾಗ 'ನನ್ ಚೀಲ ಕೊಡಿ' ಅಂತ ಕೇಳ್ದಾಗ "ಯಾರೋ ವಡ್ಕಂಡೋಗವ್ರೆ" ಅಂತ ಪೋಲೀಸಪ್ನ ಏಳ್ದಾಗ... "ಅಯ್ಯೋ ಪಾಪ! ಯಾರೂ ಟೇಸನ್ನಾಗೆ ನೋಡ್ಕಳ್ಳಾಕೆ ಇರ್ನೀ ಇಲ್ವೇನೋ! ಅದ್ಕೆ ಇಂಗಾಗೈತೆ! ಓಗ್ಲಿ ಬುಡಿ, ಯೋಸ್ನೆ ಬ್ಯಾಡ!" ಅಂತ ಅವನ್ಗೆ ಸಮಾಧಾನ ಏಳಿ ಒರಕ್ ಬಂದೆ ಬುದ್ದಿ... ನಾಸೇಳಿದ್ದು ಸರಿ ಅಲ್ವರಾ ? ಪಾಪ ಈ ಪೋಲೀಸಪ್ಗಳು ಪ್ಯಾಟ್ಯಾಗೆ ಕಳ್ರುನ್ನ ಇಡಿಯಾಕೆ ಗಲ್ಲಿ ಗಲ್ಲಿ ಗಸ್ತು ವಡೀತಿದ್ರೆ ಟೇಸನ್ನು ಕಾಯೋವ್ರು ಯಾರು? ನಮ್ಮಾರ ವಳೀಕ್ ಆಕ್ದೆ "ವರ್ಗಡೆ ಕಾವ್ಲಿರು ಮಗ್ನೆ" ಅಂತ ವರ್ಗಡೆ ಮಲ್ಗಾಕ್ ಬುಟ್ಟಿದ್ದಿದ್ರೆ ಯಾವ್ ನನ್ಮಗ ಬತ್ತಿದ್ದ ಏಳಿ ? ಪಾಪ! ಆ ಟೇಸರ್ ಪುಣ್ಯ! ಬಂದವ್ನ ನನ್ ಚೀಲ ವತ್ಕಂಡ್ ಓಗ್ತಿದ್ದ...ಆ ಗೂಡ್ನಾಗ್ ಮಡ್ಗಿದ್ ಬಂದೂಕೇನಾರ ತಗಂಡೋಗಿದ್ದಿದ್ರೆ ಏನ್ ಗತಿ ಬುಡಿ ! ಅದ್ರಾಗ್ ಗುಂಡು ಆಕ್ದೆ ಇಟ್ಟಿದ್ರೂನೂವೆ... ಯಾಕಂದ್ರೆ ಕಳ್ರು ಬಂದಾಗ್ಲಾನೆ ಗುಂಡಾಕ್ಬೇಕೂಂತ ರೂಲ್ಸ್ ಇರೋದ... ಅದ್ಕೆ ಕೇಳ್ದೆ...


ಬ್ಯಳಿಗ್ಗೆ ಎದ್ದು ಕೈ ಬರ್ಸಾ ಮಾಡ್ಕಂಡು ಅಂಗೇ ಪ್ಯಾಟಿ ಸುತ್ಕೊಂಡು ಬರ್ತಿದ್ನ... ಆಗ ಒಂದ್ಕಡೀಕೆ ಒಂದೀಟ್ ಜನ ಸುತ್ಕೊಂಡು ಬರ್ತಿದ್ನ... ಆಗ ಒಂದ್ಕಡೀಕೆ ಒಂದೀಟ್ ಜನ ಕುಂತ್ಕಂಡು ತಿಂತಾ ಇದ್ರು...ಓಗಿ ನಾನೂ ಕುಂತೆ... ಯಾವ್ನೋ ಬಂದ... 'ಇಡ್ಲಿ ಐತೆ, ದ್ವಾಸೆ ಐತೆ.' ಅಂತ ಇನ್ನೂ ಏನೇನೋ ವದರ್ದ... ಒಳ್ಳೇ ಅಸಿವು...ವಟ್ಟೇ ಬಿಕೋ ಅಂತ ಕಾಲಿ ಆಗಿತ್ತು. ವಟ್ಟೇ ಬಿರ್ಯೋ ಅಂಗ್ ತಿಂದು ಕೈ ತೊಳ್ಕಂಡು "ಊಟ ಇಕ್ಕಿದಷ್ಟ್ ತಣ್‌ಗಿರ್ಲಿ." ಅಂತ ಅರುಸ್ತಾ ಎಳ್ದು ಗಿಳಾಸು ನೀರು ಕುಡ್ದು ವರಕ್ ಬಂದೆ...ಬತ್ತಾ ಇದ್ದಂಗೆ ಯಾವನೋ ಕುತ್ಗೆ ಪಟ್ಟಿ ಇಡ್ಕ್ಯೋದ...ತಿರುಗ್ ನೋಡಿ "ಯಾಕ್ರ ಬುದ್ಧಿ? ಯಾಕ್ ಇಂಗ್ ಕುತ್ಗೆ ಇಡ್ ಕಂಡ ನಿಂತಿದೀಯು? 'ಅಂತ ಕೇಳ್ದೆ.... ಅದ್ಕೆ ಅವ್ರು 'ಏನ್ಲಾ ಇದೇನ್ ನಿನ್ ಮಾವನ್ ಮನೇನ? ದುಡ್ ಮಡಗ್ದೆ ಅಂಗೆ ಓಗ್ತಾ ಅದೀಯಲ್ಲ...ದುಡ್ ಮಡುಗ್ಲ' ಅಂತ ಅಂದು 'ಏನು ಓಟ್ಲು ನಿನ್ ಮಾವ್ನಂದ?' ಅಂತ ಕೇಳ್ದ್ರು. "ಅಯ್ಯಾ ನೀವ್ ಎಣ್ ಕೊಟ್ರೆ ಬ್ಯಾಡ ಅಂತೀನ?" ಅಂತ ಏಳೋವ ಅಂತ ಅಂದ್ಕಂಡ್ ಬಾಯ್ ಬುಡುವ ಅಂತ ಇದ್ದಂಗೆ ಅವ್ರು ದರ ದರ ಅಂತ ಎಳ್ಕಂಡೋ ಮೂಲೇಗಿದ್ ಪಾತ್ರೆ ಪಗಡಿ ತೋರ್ಸಿಗಿ 'ಎಲ್ಲ ತೊಳ್ದು ಜೋಡ್ಸಿಡ್ಲೆ ಮಗ್ನೆ' ಅಂತ ತಳ್ಬುಟ್ಟು ಓದ್ರು! ಅದೇನ್ ಗನಾಂದಾರಿ ಕೇಲ್ಸಾನ ಏಳಿ ಮತ್ತೆ... ಅಳ್ಳೀಲಿ ನಂ ಗೌಡ್ರ ಮನ್ಯಾಗೆ ಏನೇನ್ ತೊಳ್ದಿದ್ನಿ...!

ಅಂಗೇ ಕೆಲ್ಸ ಆದ್‌ಮ್ಯಾಕೆ ಓಟ್ಲಿಂದ ಒರಕ್ ಬುಟ್ರಲ್ಲ ಆಗ್ ಏಳ್ದೆ 'ಬ್ಯಾಕಾರೆ ಇಲ್ಲೇ ಇತ್ತೀನಿ ಬುಡಿ' ಅಂತ ಏಳ್ದೆ......ಆಗ' ಲೋ ಆನೆ ತಿಂದಂಗ್ ತಿಂತೇಯ.... ನಿನ್ ಇಟ್ಕಂಡ್ರೆ ಓಟ್ಲು ಎಕ್ಕಾ ಉಟ್ಕೋಯ್ತದೆ' ಅಂತ ಗದ್ರುಸಿ ಅಟ್ಟೇ ಬುಟ್ರು... ಅಲ್ರಪಾ...ಇದ್ ನ್ಯಾಯಾವಾ ಏಳಿ...ನಾನ್ ಅಳ್ಳಿ ಮುಕ್ಕ...ಚಂದಾಗ್ ದುಡೀ ತೀನಿ...ಚಂದಾಕ್ ತಿಂತೀನಿ...ಇವ್‌ನ್ಯಾವ್ನು ನನ್ಮ್ಯಾಕೆ ಇಂಗ್ ಕಣ್ ಆಕೋಕ್ಕೆ ಅಂತ ಬೊಯ್‌ಕೊಂಡ್ ಅಲ್ಲಿಂದ ಒಂಟಿಷ್ನ ಇರೊಕ್ಕೊಂದು ಸೂರ್ ಬೇಕಲ್ರ...... ಅದ್ನ ಉಡುಕ್ಕೊಂಡು ಊರೆಲ್ಲ ತಿರ್ಗಾಡ್ದೆ......

ಎಲ್ಲೋದ್ರೂ ಒಂದೇ ರಾಗ ಬುದೀ......"ಎಲ್ಲಪ್ಪ ಕೆಲಸ್ದಾಗ್ ಅದಿ ?... ಬಾಂಕ್‌ನಾಗಾ ? ಸರ್ಕಾರಿ ಆಫೀಸ್ನಾಗ ? ಅಂತ ಕೇಳ್ದ್ರು......ಎಲ್ಲೂ ಇಲ್ಲ ಅಂದ್ರೆ ಸ್ಲಮ್‌ಗೋಗು ಅಂತ ಯಾರೋ ಏಳಿದ್ ಕೇಳಿ ಅದೆಲ್ಲದೇಪ್ಪಾ ಅಂತ ಉಡುಕ್ತಾ ವಂಟೆ......

ಜಂಬಲ್ಸ್

ನಾಗೂಶ್ರೀ ಸೂರಿ



ಸರಿಯುತ್ತರಕ್ಕೆ 38ನೇ ಪುಟ ನೋಡಿ

ಸ್ಟೆಫಿ ಮತ್ತು ಪಿ. ಯು. ಸಿ.

ಶಿವು

ವರಕವಿ ಬೇಂದ್ರೆ ವರ್ಣಿಸಿರುವ ಶ್ರಾವಣ, ಕ್ಲಬ್ಬಿಗೂ ಬಂದಿತ್ತು. ಗಮ್ಮತ್ತೆಂದರೆ ನಾವೆಲ್ಲಾ ಬಾರಿನಲ್ಲಿ ಕೂತು, ಪಾನಕಪೂಜೆ ಪ್ರಾರಂಭಿಸಿದ ನಂತರವೇ, ಹೊರಗೆ ಮಳೆ ಹನಿಯಲು ಶುರುವಾದದ್ದು. ಮನೆಯಿಂದ ಹೊರಡುವಾಗಲೇ ಮಳೆ ಹಿಡಿದಿದ್ದರೆ ಅರ್ಧಕ್ಕರ್ಧ ಬಾರ್ ಖಾಲಿ ಇರುತ್ತಿದ್ದುದು ಖಂಡಿತ. ಆ ಸಂಜೆ ನಮ್ಮ ಕಿಚನ್ ಕರಿಯಪ್ಪ ಒಂದು ಹೊಸ ತಿನಿಸು ತಯಾರಿಸಿದ್ದ. ಮುಸುಕಿನ ಜೋಳವನ್ನು ಹದವಾಗಿ ಉಪ್ಪು ನೀರಿನಲ್ಲಿ ಬೇಯಿಸಿ, ಕಾಳುಗಳನ್ನು ಬಿಡಿಸಿ, ಹಗೂರವಾಗಿ ಮಸಾಲೆ ಪುಡಿ, ಉದುರಿಸಿ ಪಿಂಗಾಣಿ ತಟ್ಟೆಗಳಲ್ಲಿ ನಮಗೆ ಸರಬರಾಜಾಗಿತ್ತು. ಹೊರಗಿನ ಜಡಿ ಮಳೆಗೂ ಈ ಬಿಸಿ, ಬಿಸಿ, ಕಾಳಿಗೂ ಒಂದು ಅಪೂರ್ವವಾದ ಹೊಂದಾಣಿಕೆ ಇತ್ತು.

"ಸ್ಟೆಫಿ ಮೊದಲನೇ ಸುತ್ತಿನಲ್ಲೇ ಎಲಿಮಿನೇಟ್ ಆದುದ್ದು ತೀರಾ ಅನ್ಯಾಯ" ಅಂದ ಪಿ. ಆರ್.

"ಅದು ಎಲ್ಲಾ ಬಿಟ್ಟು ಆ ಕರಿಯಳ ಕೈಯಲ್ಲಿ ಹೊಡೆಸಿಕೊಂಡಳಲ್ಲಾ" ಅಂತ ಮಹದೇವ ದನಿಗೂಡಿಸಿದ. ಮಹದೇವ ನಮ್ಮ ರೆಸಿಡೆಂಟ್ ರೇಸಿಸ್ಟ್. ಬೆಳಗಿನ ಉಪಹಾರಕ್ಕೆ ಮೊಟ್ಟೆ, ಹಾಲು, ಮನೆಗೆ ವೈಟ್‌ವಾಷ್, ಹಾಕ್ಕೊಳ್ಳೊದು ಬಿಳೀ ಷರಟು, ಹೀಗೆ ಯಾವಾಗಲೂ ಬಿಳೀ ಬಿಳೀ ಅಂತ ಸಾಯ್ತಾನೆ ಮಹದೇವ.

"ಅದು ಹಾಗಲ್ಲ ಮರಿ. ಬೆಕರ್ ಕರೀ ಗರ್ಲ್‌ಫ್ರೆಂಡ್ ಹುಡುಕಿಕೊಂಡ ಮೇಲೆ ತಾನೇನು ಕಮ್ಮಿ ಅಂತ ಸ್ಟೆಫಿ ಹೀಗ್ಮಾಡಿಬರ್ತೋದು ಅಷ್ಟೇ" ಸೂರಿ ಸಮಜಾಯಿಷಿ ಹೇಳಿದ. ಈ ಟೆನ್ನಿಸ್ ತಾರೆಗಳ ಬಗ್ಗೆ ಯಾವ ಚಿಲ್ಲರೆ ಮಾಹಿತಿ ಬೇಕಾದ್ರೂ ಸೂರೀನೇ ಕೇಳಬೇಕು.

"ಸಾಕು, ನಿಲ್ಲಿಸ್ರೋ ತೋಳ ಹಳ್ಳಕ್ಕೆ ಬಿದ್ರೆ ಆಳಿಗೊಂದು ಕಲ್ಲಂತೆ. ಸ್ಟೆಫಿ, ಬೆಕರ್, ಇವರಿಗೆಲ್ಲಾ ಟೆನ್ನಿಸ್ ಒಂದು ವೃತ್ತಿ, ವೃತ್ತಿ ಅಂದಮೇಲೆ ಸೋಲು ಗೆಲವು ಇದ್ದೇ ಇರುತ್ತೆ ಅಂತ ತಿಳ್ಕೊಂಡು ಅವರು ಅದನ್ನೆಲ್ಲಾ ಅಷ್ಟೊಂದು ಮನಸ್ಸಿಗೆ

ಹಚ್ಚಿಕೊಳ್ಳೋದೇ ಇಲ್ಲ. ನಮ್ಮ ದೇಶದ ತರಹಾ ಅಲ್ಲ ಅಲ್ಲಿ, ಇಲ್ಲಿ ಅಜರುದ್ದಿನ್ ಒಂದು ಸೆಂಚುರಿ ಹೊಡದ್ರೆ-ಅಟ್ಟಕ್ಕೇರಿಸಿ ಬಿಡ್ತಾರೆ, ಬೇಗ ಔಟಾದ್ರೋ-ಪಾತಾಳಾನೇ ಗತಿ"

ಈ ಮಾತು ಹೇಳಿದ್ದು ದೇವು. ದೇವು ನಿಮಗೆ ಗೊತ್ತಿರಬೇಕಲ್ಲ, ನಮ್ಮ ಗೆಳೆಯರ ಬಳಗದ ಸ್ಟಾರ್ ಅಟ್ರ್ಯಾಕ್ಷನ್.

"ದೇವು ಒಂದ್ಸಮಯ ಸ್ಟೆಫಿ ಇಂಡಿಯಾದಲ್ಲಿ ಹುಟ್ಟಿದ್ದಿದ್ರೆ ಏನಾಗಿರ್ತಿದ್ಲೋ? ರಾಜು ಕೇಳಿದ. ರಾಜು ದೇವೂಗೆ Straight man. ದೇವೂನ ವಾಕ್- ಝರಿ ಹೊರಡಿಸ್ಬೇಕಾದ್ರೆ, ಅದರ ಕೀಲಿ ರಾಜು ಕೈಯಲ್ಲಿ–ಸಾರಿ–ಬಾಯಲ್ಲಿ.

"ಇನ್ನೇನಾಗ್ತಾ ಇತ್ತೊ, ಎಸ್ಸೆಸ್ಸೆಲ್ಸಿ ಪಾಸಾದ ಮೇಲೆ, ಕೇವಲ ಎಂಬತ್ತು ಪರ್ಸೆಂಟ್ ಬಂದಿದೆ ಅಂತ ಮನೆಯವರ ಹತ್ರ ಛೀಮಾರಿ ಹಾಕಿಸ್ಕೊಂಡು ಮೂಲೇಲಿ ಕೂತ್ಕೋತಾ ಇದ್ಲು. ಅವರಪ್ಪ, ಮಗಳಿಗೆ ಪಿ.ಸಿ.ಎಂ.ಬಿ. ಕೊಡಿಸೋಕೆ ಅಧಿಕಾರಿ ಗಳ ಮನೆ ಬಾಗಿಲು ಕಾಯ್ತಾ ಇರ್ತಿದ್ದ ಅಷ್ಟೆ"

ಅಷ್ಟು ಹೊತ್ತಿಗೆ ಮಧ್ಯವಯಸ್ಸಿನ ಮಹಿಳೆಯೊಬ್ಬರು ಬಾರ್ ಒಳಕ್ಕೆ ಬಂದರು. ಅವರನ್ನು ನೋಡಿದ ತಕ್ಷಣ, ದೇವು ಎದ್ದು ನಿಂತು ಅವರ ಬಳಿ ಹೋಗಿ ಮಾತನಾಡಿ ಸಲು ಪ್ರಾರಂಭಿಸಿದ. ಒಂದೆರಡು ನಿಮಿಷ ಮಾತನಾಡಿ, ಆಕೆ ದೇವುಗೆ 'ಬೈ' ಹೇಳಿ ಹೊರಟು ಹೋದರು.

"ಆಕೆ ಬಾಗಿಲನಾಚೆ ಮರೆ ಆದ್ರು ದೇವು. ಒಳಕ್ಕೆಳೆದು ಕೊಂಡಿರೋ ಹೊಟ್ಟೇನ ಸಡಿಲು ಬಿಟ್ಟು ನಿರಾಳವಾಗಿ ಉಸಿರಾಡಬೋದು" ಅಂತ ಪಿ. ಆರ್. ಕುಹಕ ನುಡಿದ.

"ಇದು ಫ್ಯೂಯಲ್ ಸೇವಿಂಗ್ ಪ್ಲಾನ್ ಕಣೋ. ಬೊಜ್ಜಿದ್ದಷ್ಟೂ ಬೆಂಕಿ ಚೆನ್ನಾಗಿ ಉರಿಯುತ್ತಂತೆ. ಆದಿರ್ಲಿ ಬಂದಿದ್ದೋರು ಮಿಸೆಸ್ ಜಗನ್ ಅಂತ. ನಮ್ಮ ಪಕ್ಕದ ಮನೆಯಾಕೆ. ಅವರ ಮಗಳಿಗೆ ಪಿ. ಇ. ವೈ. ಜೆ. ಕಾಂಬಿನೇಷನ್ನೇ ಬೇಕಂತೆ ಎಸ್. ಎಸ್. ಎಲ್. ಸಿ. ದಾಟಿದಾಳೆ ಹುಡುಗಿ. ಪ್ರಿನ್ಸಿಪಾಲಿಣಿಗೆ ಹೇಳ್ತೀರಾ ಅಂತ ಕೇಳೂಕ್ಕೆ ಬಂದಿದ್ರು. ನಾಳೆ ಸಂಜೆನೇ ಫೈನಲ್ ಲಿಸ್ಟ್ ಹಾಕ್ತಾರಂತೆ" ಅಂತ ಹೇಳುತ್ತಾ ದೇವು ಬಂದು ಪುನಃ ಆಸನಾಸೀನನಾದ.

"ಅದ್ಯಾವ ಕಾಂಬಿನೇಷನ್ನೋ ಪಿ. ಇ. ವೈ. ಜೆ" ? ನಾನು ನಿಜವಾದ ಕುತೂಹಲದಿಂದ ಕೇಳಿದೆ.

"ಅದೇನೋ ಸೈಕಾಲಜಿ, ಇಕನಾಮಿಕ್ಸ್, ಜರ್ನಲಿಸಂ ಅಂತ ಹೇಳ್ತಾಇದ್ದ ಹಾಗಿತ್ತು ಆಕೆ"

"ವೈ. ಜೆ. ಅಂತ ಯಾಕೆ" ?

"Yellow Journalism ಇರಬಹುದು" ಅಂತ ಯಾರೋ ಹೇಳಿದರು.

"ಯಾವ್ಯಾವ ಕಾಂಬಿನೇಷನ್ ಇದ್ರೂ ಜನ ಪಿ. ಸಿ. ಎಂ. ಬಿ. ನೇ ಬೇಕು ಅಂತ ಒದ್ದಾಡ್ತಾರಲ್ಲಾ" ಅಂದ ಸುಬ್ಬು.

"ಪಾಪ ! ಇನ್ನೇನ್ಮಾಡ್ತಾರೋ ಹುಡುಗ, ಹುಡುಗೀರು—ಇಂಜಿನೀರಿಂಗ್ ಅಥವಾ ಮೆಡಿಸಿನ್ ನಲ್ಲಿ ಸೀಟುಸಿಗದೇ ಇದ್ರೆ ಜೀವನ ನಶ್ವರ ಅಂತ ಪೇರೆಂಟ್ ತೊಟ್ಲಿಂದಾನೇ ಜೋಗುಳ ಹಾಡಿರ್ತಾರಲ್ಲಾ"

"ಅಲ್ಲಾ ನಿಜ ಜೀವನಕ್ಕೆ ಉಪಯೋಗ ಆಗೋ ಕಾಂಬಿನೇಷನ್ ಆಫರ್ ಮಾಡಿದ್ರೆ, ವಿದ್ಯಾರ್ಥಿಗಳು ಅವುಗಳನ್ನ ಆರಿಸೇ ಆರಿಸ್ತಾರೆ" ರಾಜು ಹೇಳಿದ.

ದೇವು ಕ್ಯೂ ತಗೊಂಡ.

"ರಾಜ, ನೀ ಹೇಳಿದ್ದು ಸರಿ, ಈಗ ನೋಡು ಪೊಲಿಟಿಕಲ್ ಸಯನ್ಸ್ ಅಂತ ಒಂದು ವಿಷಯ ಹೇಳಿಕೊಡ್ತೀವಿ ಅಂತಾರೆ. ಪಾಲಿಟಿಕ್ಸ್, ಸಯನ್ಸಲ್ಲಾ, ಅದೊಂದು ಆರ್ಟು ಅಂತ ಹುಟ್ಟಿದ ಹುಳೂಗೂ ಸಹ ಗೊತ್ತು. ಬಿ. ಸಿ. ಪಿ. ಎ. ಅಂತ ಒಂದು ಕಾಂಬಿನೇಷನ್ ಕೊಟ್ರೆ ಅರ್ಧಕ್ಕರ್ಧ ಜನ ತಗೋತಾರೆ ನೋಡಪ್ಪ"

"ಬಿ. ಸಿ. ಪಿ. ಎ. ? ಹಾಗೆಂದ್ರೇನೋ ? ರಾಜು ಕೇಳಿದ"

"ಬೂತ್-ಕ್ಯಾಪ್ಚರಿಂಗ್ ಇನ್ ಪೊಲಿಟಿಕಲ್ ಆರ್ಟ್ಸ್. ಈಗಿನ ಜನ ಜೀವನಕ್ಕೆ ಹುಡುಗರ್ನ, ಹುಡುಗಿರ್ನ ತಯಾರು ಮಾಡುಕ್ಕೆ ಇಂಥಾ ಕಾಂಬಿನೇಷನ್ನುಗಳನ್ನು ಬೇಕಾದಷ್ಟು ಆಫರ್ ಮಾಡಬಹುದು. ಕಲ್ಪನಾ ಶಕ್ತಿ ಬೇಕು ಅಷ್ಟೆ"

ನಮ್ಮೆಲ್ಲರಿಗೂ ಒಂದು ಛಾಲೆಂಜ್ ಎಸೆದಂತಾಯಿತು, ದೇವು ಮಾತು. ರಾಘು ಮೊದಲ ಬಾಣ ಎಸೆದ.

"ನಾನಾಗಿದ್ರೆ, ಎಫ್. ಎಮ್. ಎ. ಹೆಚ್. ಕಾಂಬಿನೇಷನ್ ಹೊರಡ್ಸಿ, ಬಿ. ಕಾಂ ವಿದ್ಯಾರ್ಥಿಗಳನ್ನೆಲ್ಲಾ ಎಳಕೊಂಡು ಬಿಡ್ತಿದ್ದೆ. ಹಾಗೆಂದ್ರೇನೊ ಅಂತ ಕೇಳಿದ್ರಾ–ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಅಕಾರ್ಡಿಂಗ್‌ಟು ಹರ್ಷದ್"

ಎಲ್ಲರೂ ಮಂದಸ್ಮಿತರಾದರು. ನಮ್ಮ ಕ್ರಿಯೇಟಿವ್ ಪವರ್ಸ್‌ಗೆ ಶಾಯಿಲ್ ಛಾಲೆಂಜನ್ನು ಮೀರಿದ ಛಾಲೆಂಜ್ ದೊರಕಿತು.

"ಇಲ್ಕೇಳ್ರೊ–ನಾನು ಕಂಡುಹಿಡಿದಿರೋ ಡಿ. ಎಂ. ಎ. ಎನ್ ಕಾಂಬಿನೇಷನ್ ಸಿಕ್ರೆ, ದೇಶಕ್ಕೆ ಸಾವಿರಾರು ಕಾರ್ಪೋರೇಟ್ ಎಕ್ಸಿಕ್ಯುಟಿವ್‌ನ ತಯಾರಿಸ್ಬೋದು" ಬಾಲ ಹೇಳುತ್ತಿದ್ದಂತೆ ದೇವು ಬಾಯಿ ಹಾಕಿ.

"ನಿನ್ನ ಕಾಂಬಿನೇಷನ್ ಡಿಸಿಷನ್ ಮೇಕಿಂಗ್ ಅಕಾರ್ಡಿಂಗ್‌ಟು ನರಸಿಂಹರಾವ್ ಅಲ್ವೇನೋ" ಅಂತ ಸಸ್ಪೆನ್ಸ್ ಬ್ರೇಕ್ ಮಾಡಿದ.

ಆ ಸಮಯಕ್ಕೆ ಸರಿಯಾಗಿ ಶಾಂತಾರಾಂ ಬಂದು.

"ಜಿಮ್‌ನಲ್ಲಿ ಮಂಗಳಾರ್ತಿ ಆಗ್ತಾ ಇದೆ, ಬರೋರೆಲ್ಲಾ ಬನ್ನಿ" ಅಂತ ಆಹ್ವಾನಿಸಿದ.

ಶಾಂತು, ನಮ್ಮ ಕ್ಲಬ್ಬಿನ ಸ್ಪೋರ್ಟ್ಸ್ ಕಮಿಟಿ ಛೇರ್ಮನ್. ಬಹಳ ಮುತುವರ್ಜಿಯಿಂದ ಸದಸ್ಯರ ಬೊಜ್ಜು ಕರಗಿಸುವ ಘನ ಉದ್ದೇಶದಿಂದ ವಂತಿಗೆ ಎತ್ತಿ ಜಿಮ್ ಒಂದನ್ನು ಕ್ಲಬ್ಬಿನಲ್ಲಿ ಸ್ಥಾಪಿಸಿದ್ದಾನೆ. ನಾಳೆ ಬೆಳಗ್ಗೆ ಅದರ ಉದ್ಘಾಟನೆ, ಅದಕ್ಕೆ ಪೂರ್ವಭಾವಿಯಾಗಿ ಈ ಸಂಜೆ ಶಾಂತಾರಾಂ ದಂಪತಿಗಳಿಂದ ಹವನ, ಹೋಮ, ಮಂಗಳಾರತಿ,

"ನಾನು ಬರ್ತೀನಿ" ಅಂತ ರಾಜು ಎದ್ದ

"ಲೋ ರಾಜು ಕೂತ್ಕೊಳ್ಳೋ. ನೀನು ಕುಡಿದಿರೋ ಆಲ್ಕೋ ಹಾಲನ್ನ ಉಸಿರಾಡ್ಕೊಂಡು ಮಂಗಳಾರತಿ ತಗೊಂಡ್ರೆ, ಉಸಿರಿನಲ್ಲಿರೊ, ಆಲ್ಕೊಹಾಲ್ ಹತ್ಕೊಂಡು, ಮೂಗಿನಿಂದ ಜ್ವಾಲೆಗಳು ಹೊರಟು, ಚೈನೀಸ್ ಡ್ರಾಗನ್ ತರಹ ಆಗಿ, ಜಿಮ್‌ನೆಲ್ಲಾ ಸುಟ್ಟು ಹಾಕಿ ಬಿಡ್ತಿ ಅಷ್ಟೇ. ತೆಪ್ಗೆ ಇಲ್ಲಿಂದ್ಲೇ ನಮಸ್ಕಾರ ಹಾಕು" ಅಂದ ದೇವು. ರಾಜು ತೆಪ್ಗೆ ಕೂತ.

ಅಸಿಡಿಟ ಕಾರಣ, ಆಲ್ಕೋ ಇಲ್ಲದ ಬರೀ ಹಾಲನ್ನೇ ಕುಡಿದದ್ದರ ಪ್ರಯುಕ್ತ, ನಾನು ಎದ್ದು ನೇರವಾಗಿ ಶಾಂತಾರಾಂ ಜೊತೆ ಜಿಮ್ ಕಡೆ ನಡೆದೆ.

12

ನಾನಾಗಿದ್ದಿದ್ದರೆ

ನಂದಿನಿ ಕಾಪಡಿ

ಮೊನ್ನೆ ರೇಲ್ವೆ ಸ್ಟೇಷನ್ನಿಗೆ ಹೋದಾಗ ನನ್ನ ಮಗಳು ಅಲ್ಲೇ ಬರುತ್ತಿದ್ದ ಪುಸ್ತಕದ ಗಾಡಿಯುವನ ಹತ್ತಿರದಿಂದ "ಚಂದಮಾಮಾ" ಪತ್ರಿಕೆಯನ್ನು ತೆಗೆದುಕೊಂಡು ಬಂದಳು. ರೈಲಿಗೆ ಕಾಯುತ್ತಾ ನಾನೂ ಆ ಪತ್ರಿಕೆಯ ಕಡೆಗೆ ಕಣ್ಣು ಹಾಯಿಸಿದೆ. ಬಾಲ್ಯದ ಜ್ಞಾಪಕ ಬಂದಿತು. ನಾವೆಲ್ಲಾ ಓದುತ್ತಿದ್ದುದು ಕನ್ನಡದ ಚಂದಮಾಮಾ ವನ್ನು. ಪುರಾಣ, ಚರಿತ್ರೆ, ಕಲ್ಪನೆ ಹೀಗೆ ನಾನಾ ತರಹದ ಕಥೆಗಳನ್ನೋದುತ್ತಾ ನನ್ನ ಬಾಲಿಶ ಮನ ಯಾವ ಯಾವದೋ ವಿಚಾರಗಳನ್ನು ಅರ್ಥಮಾಡಿ ಕೊಳ್ಳಲು "ಚಂದಮಾಮಾ" ಸಹಾಯ ಮಾಡುತ್ತಿತ್ತು.

ಹಿಂದೆ ಓದಿದ ಕಥೆಯೊಂದು ಈಗಲೂ ನನಗೆ ನೆನಪಿದೆ. ಮುದುಕಿಯೊಬ್ಬಳು ಮಗನೊಂದಿಗೆ ತನ್ನ ಗುಡಿಸಿಲಿನಲ್ಲಿ ವಾಸವಾಗಿರುತ್ತಾಳೆ. ಮಗನಿಗೆ ಹೆಣ್ಣುತಂದು ಮದುವೆ ಮಾಡುತ್ತಾಳೆ. ಸೊಸೆ ಎಲ್ಲಾ ಕೆಲಸದಲ್ಲೂ ತುಂಬಾ ಚೂಟಿ. ಬಾವಿ ಯಿಂದ ನೀರು ಸೇದಿ ತರುವುದು. ಮನೆಕೆಲಸವೆಲ್ಲಾ ಮಾಡುವುದು, ಅತ್ತೆಯನ್ನು ಉಪಚರಿಸುವುದು ಹೀಗೆ ಎಲ್ಲಾ ಕೆಲಸದಲ್ಲೂ ಭಾರೀ ಚೂಟಿ ಹುಡುಗಿ, ಮುದುಕಿ ಹಾಯಾಗಿರುತ್ತಾಳೆ. ಸೊಸೆಗೆ ಒಂದು ಮಗುವೂ ಆಗುತ್ತದೆ.

ಒಂದು ದಿನ ಪರ ಊರಿಗೆ ಹೋಗಿದ್ದ ಮಗ ರಾತ್ರಿ ಹೊತ್ತಾಗಿ ಮನೆಗೆ ಬರುತ್ತಾನೆ. ಅತ್ತೆಯ ಪಕ್ಕದಲ್ಲೇ ಸೊಸೆ ಮಗುವನ್ನು ತೊಟ್ಟಿಲಲ್ಲಿ ತೂಗುತ್ತ ಮಲಗಿರುತ್ತಾಳೆ. ಗಂಡ ಬಾಗಿಲು ತಟ್ಟಿದಾಗ ಸೊಸೆ ಮಲಗಿದ ಜಾಗದಿಂದಲೇ ಕೈ ಉದ್ದಕ್ಕೆ ಚಾಚಿ ಬಾಗಿಲಿನ ಅಗುಳಿ ತೆಗೆದು ಬಿಡುತ್ತಾಳೆ. ಒಂದು ಕಣ್ಣು ಬಿಟ್ಟು ಕೊಂಡು ನೋಡುತ್ತಿದ್ದ ಮುದುಕಿಗೆ ಸೊಸೆಯ ಕೈ ಇಷ್ಟು ಉದ್ದಕ್ಕೆ ಚಾಚಿರುವುದು ನೋಡಿ ಸಂಶಯ ಬರುತ್ತದೆ, ಇದು ಹೆಣ್ಣೇ ಅಲ್ಲ ಒಂದು ದವ್ವವೆಂದು ಅರಿವಾಗಿ ಅಲ್ಲೇ ಇದ್ದ ಬಾರು ಕೋಲನ್ನು ಹಿಡಿದು ಸೊಸೆಯ ಬೆನ್ನಿಗೆ ದಬಾರೆಂದು ಬಡಿದು "ಹೋಗು ಹೋಗು" ಎಂದು ಹೊರಗಟ್ಟಿ ಬಾಗಿಲು ಹಾಕಿಕೊಳ್ಳುತ್ತಾಳೆ.........

ನಾಲ್ಕೈದು ದಿನ ಕೆಲಸದವಳು ಬರಲಿಲ್ಲವೆಂದು ನಾನೇ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಸುಸ್ತಾಗಿ ಬಂದಿದ್ದ ನನಗೆ ನಾನೇ ಆ ಮುದಕಿಯಾಗಿದ್ದಿದ್ದರೆ ಖಂಡಿತ ಆ ಹೆಣ್ಣನ್ನು ಓಡಿಸುತ್ತಿರಲಿಲ್ಲವೆನಿಸಿತು.

13

ಆಹಾ, ಬೆಂಗಳೂರು!

–ಓಂ ಪ್ರಕಾಶ್

ಈಚೆಗೆ ಬೆಂಗಳೂರು ರಸ್ತೆಗಳಲ್ಲಿ ಟ್ರಾಫಿಕ್ ಅಸಾಧ್ಯವಾಗಿ ಹೋಗಿದೆ. ಹಲವಾರು ರಸ್ತೆಗಳನ್ನ ಏಕಮುಖ ಮಾಡಿದರೂ, ನಂ ಸಂಕಷ್ಟಗಳು ಪರಿಹರಿದಿಲ್ಲ. ನನ್ ಕ್ಲಿನಿಕ್ ಇರೋದು ಮೆಜೆಸ್ಟಿಕ್ ಹೃದಯದಲ್ಲಿ. ಅಲ್ಲಿಗೆ ಸೇರಿ ಪಾರ್ಕ್ ಮಾಡಿದರೆ, ಸಧ್ಯ ಇನ್ನೊಂದು ದಿನ ಉಳಿದೆನಲ್ಲ ಅಂತ ನಿಟ್ಟುಸಿರು ಬಿಡೋ ಹಾಗಾಗುತ್ತೆ! ಈಗಿನ ವ್ಯವಸ್ಥೇಲಿ, ನನ್ ಕ್ಲಿನಿಕ್ ಸೇರಬೇಕಾದರೆ, ಎರಡು ಮುಖ್ಯ ಅಂಶಗಳು ಬೇಕು. ಭಗವಂತನಲ್ಲಿ ಅಪಾರವಾದ ನಂಬಿಕೆ, ಹಾಗೂ ನರ್‌ವಸ್ ಆಫ್ ಸ್ಟೀಲ್! ಸುಬೇದಾರ್ ಚತ್ರಂ ರಸ್ತೇಲಿ ಕಾರ್ ಬಿಡೋದು ಎಂತಹ ಗಂಡುಗಲಿಗೂ ಎದೆ ನಡುಗಿಸೋ ಸಾಹಸ. ಪಾದಚಾರಿಗಳ ಎಡ್ಡಾ ದಿಡ್ಡಿ ಸಮೂಹ, ಸೈಕಲ್, ಕೈಗಾಡಿಗಳ ಅವಾಂತರ, ಪಕ್ಕದ ಕ್ರಾಸ್ ರಸ್ತೆಗಳಿಂದ ಸರ್ರನೆ ಹಾಯ್ದು ಬರೋ ಆಟೋಗಳು, ದೇವಸ್ಥಾನದ ಹತ್ರ ತೇರು ಅದರ ಸುತ್ತ ಭಕ್ತಾದಿಗಳು, ಪೋಲೀಸರು, ಭಿಕ್ಷುಕರು – ಇವರ ಚಕ್ರ ವ್ಯೂಹವನ್ನ ಬೇಧಿಸಿಕೊಂಡು ಹೋದ ಮೇಲೆ ಮೆಜೆಸ್ಟಿಕ್ ಸರ್ಕಲ್ (ಸ್!); ಸಂಜೆ ಹೊತ್ತಂತೂ ಅಲ್ಲಿ ಅಪಾರ ಜನ. ಬಲಗಡೆ ಬಸ್‌ಸ್ಟೇಷನ್‌ಗೆ ಧಾವಿಸುವ ದೈತ್ಯಾಕಾರದ ಬಸ್ಸುಗಳು. ಅವನ್ನ ನಿಭಾಯಿಸಿ ಮುಂದೆ ಸಾಗಿದರೆ ಒಬ್ಬ ಪೋಲೀಸ್! ಅವನ ಕೆಲಸ ಆನೆನ್ವಿಯಬಲ್! ಎಡಗಡೆಯಿಂದ ಬರೋ ವಾಹನಗಳು, ರಸ್ತೆ ಕ್ರಾಸ್ ಮಾಡಲು ಕಾತರರಾಗಿ ಪ್ರಾಣದ ಹಂಗನ್ನು ತೊರೆದು ಮುನ್ನುಗ್ಗುವ ಪದಾತಿಗಳು, ಬಸ್ಸಿನಿಂದ ಫಳಕ್ಕನೆ ರಸ್ತೆಗೆ ಹಾರಿ. ದಢ ದಢ ಓಡಿ, ನಸುನಗುವ ಯುವಕರು,– ಇವೆಲ್ಲವನ್ನೂ ಸ್ಥಿತ ಪ್ರಜ್ಞತೆಯಿಂದ, ಸಂಯಮದಿಂದ ಕಂಟ್ರೋಲಿಸುವ ಭಾಗ್ಯ ಎಷ್ಟು ಜನಕ್ಕೆ ಇದ್ದೀತು? ಈ ಪೋಲೀಸನ ಹಿಂದೆ ನಾನು ಕಾರು ನಿಲ್ಲಿಸಿ, ಎಡಗಡೆಯ ವಾಹನ ಧಾರೆಯಲ್ಲಿ ಸ್ವಲ್ಪ ನಿಧಾನ ಕಂಡಾಗ ಸರ್ರನೆ ರಸ್ತೆಯ ಎಡ ತುದಿ ಸೇರಬೇಕು. ನನ್ನ ಕ್ಲಿನಿಕ್ ಇರೋದು ರಸ್ತೆ ಎಡಭಾಗದಲ್ಲಿ. ನಾನು ಸ್ವಲ್ಪ ನಿಧಾನಿಸಿದರೂ, ಮೇಲ್ಕಂಡ ಪೋಲೀಸ್ ಉಗ್ರನಾಗಿ, "ಓಗ್ರೀ, ಓಗ್ರೀ!' ಅಂತ ಕೂಗ್ತಾನೆ. ನಾನು ದೈನ್ಯದಿಂದ, ಎಡಗೈಯನ್ನು (ಸಾಂಕೇತಿಕವಾಗಿ) ಕ್ಲಿನಿಕ್ ಕಡೆ ತೋರಿಸ್ತೀನಿ, ಕೆಲವು ಸಲ, ಅಲ್ಲಿ ದಯಾಮಯನಾದ ಪೋಲೀಸ್ ಇದ್ದಲ್ಲಿ ಅವನು ಎಡರಸ್ತೆಯ ವಾಹನಗಳನ್ನ ಕ್ಷಣಕಾಲ ನಿಲ್ಲಿಸಿ ನನಗೆ ಸಹಾಯ ಮಾಡೋದೂ ಉಂಟು! ಆದರೆ ಇದು ಮರುಭೂಮಿಯ ಮರೀಚಿಕೆಯಂತೆ ವಿರಳ!

ಮೊನ್ನೆ ಒಂದು ಸಂಗತಿ ನಡೀತು. ಇದನ್ನ ವಿಡಿಯೋ ಚಿತ್ರೀಕರಣ ಮಾಡಿದ್ರೆ ಬಹು ಚೆನ್ನಾಗಿರೋದು ! ನಾನು ಕಾರಲ್ಲಿ ಬರ್‍ತಾ ಇದ್ದೆ, ಆನಂದರಾವ್ ಸರ್ಕಲ್ ಕಡೆಗೆ–ರೈಲ್ವೆ ಸ್ಟೇಷನ್‌ನಿಂದ ರಸ್ತೇ ಮಧ್ಯದಲ್ಲಿ ಡಿವೈಡ್ ಮಾಡುಕ್ಕೆ ಲೋಹದ ಕಂಬಗಳು. ರಸ್ತೆಯ ಇನ್ನೊಂದು ಬದಿಯಲ್ಲಿ ಒಂದು ಭಾರೀ ಬಸ್ಸು ಬಂತು. ಒಬ್ಬ ಧೀರ ಅದು ನಿಂತ ಕೂಡಲೇ, ಬಸ್ಸಿನಿಂದ ಜಿಗಿದು, ರಸ್ತೆ ಡಿವೈಡರ್ ಮೇಲೆ ಒಂದು ಪಾದ ಇಟ್ಟು, ರಸ್ತೆಯ ಈ ಬದಿಗೆ ಹಾರಲು ಪ್ರಯತ್ನಿಸಿದ. ತತ್‌ಕ್ಷಣದಲ್ಲೇ ನನ್ನ ಕಾರಿನ ಆಗಮನ! ಆ ಧೀನ ಇನ್ನೊಂದು ಪಾದ ನನ್ನ ಕಾರಿನ ಬಾನೆಟ್ ಮೇಲೆ! ನನಗೆ ಒಂದು ಅನಿರ್ವಚನೀಯವಾದ ಅನುಭವ. ಜನನಿಬಿಡ ರಸ್ತೆ, ಮುಂದೆ ಸಾಗಲು ಯತ್ನಿಸಿದರೆ, ಈ ಬಾನೆಟ್ ಮೇಲೆ ತಾಂಡವವಾಡುತ್ತಿರುವ ಮೂರ್ತಿ ಬಿದ್ದರೆ ಎಂಬ ಭಯ ! ಈ ಮಧ್ಯೆ, ಹಿಂದೆ ಇದ್ದ ಲಾರಿ, ಬಸ್ಸುಗಳು ಹಾರನ್ ಮಾಡಲು ಶುರು ! ನೀವೇ ಹೇಳಿ, ಯಾವ ದೇಶದಲ್ಲಿ ಅಥವಾ ಆಯಾಮದಲ್ಲಿ ಇಂತಹ ಸಂಗತಿ ನಡೆಯುತ್ತೆ ? ಸದ್ಯ, ಪೋಲೀಸ್‌ನವನೊಬ್ಬ ಪ್ರತ್ಯಕ್ಷನಾಗಿ ತಾಂಡ ವೇಶ್ವರನನ್ನ ಧರೆಗಿಳಿಸಿ ನನ್ನ ಕಾರನ್ನ ವಿಮೋಚನೆ ಮಾಡಿದ !

ನನ್ನ ಉಳಿದ ಜೀವನದಲ್ಲಿ ಇನ್ನೂ ಏನೇನು ಈ ರೀತಿಯ ನ ಭೂತೋ ನ ಭವಿಷ್ಯತಿ ಘಟನೆಗಳು ನಡೆಯುತ್ತೋ ಕಾದು ನೋಡಬೇಕು !

ಛತ್ರಿ

ನಾಣಿ ಹಾಸ್ಯ ಕವಿ
ಆಗಲ್ಲಿಲ್ಲ.
ಕಾರಣ,
ಅವನದು ವಿಶ್ವಾಮಿತ್ರ ಗೋತ್ರ
ಅವನು ದೊಡ್ಡ ಛತ್ರಿ
ಆದ
ಕಾರಣ
ಅವನದು 'ಸೂರ್ಯ' ವಂಶ

ಹೆಚ್.ಎಸ್. ಗಿರಿಧರ್

15

ಟೈಂ ಸೆನ್ಸ್ ಮತ್ತು ದೇವರು

ಕೃಷ್ಣ ಸುಬ್ಬರಾವ್

ದೇವರಿಗೆ ಸೆನ್ಸ್ ಇಲ್ಲ ಎಂದು ನಾನು ಹೇಳಿದರೆ ಅದರ ಪರಿಣಾಮ ಏನಾಗಬಹುದು? ಎಂಬ ಪ್ರಶ್ನೆ ನನಗಿದೆ. ಅನೇಕರಿಂದ ಬೈಯಿಸಿಕೊಳ್ಳಬಹುದು ಅಥವಾ ಯಾವುದೋ ದೊಡ್ಡ ಪ್ರಶಸ್ತಿ ಬಂದರೂ ಬರಬಹುದು. ಒಟ್ಟಿನಲ್ಲಿ Extreme ಆಗಿರಬಹುದು. ನನ್ನ ಸಿದ್ಧಾಂತದ ಪ್ರಕಾರ ದೇವರಿಗೆ ಸೆನ್ಸ್ ಇದ್ದರೂ ಇರಬಹುದು. ಆದರೆ ಖಂಡಿತ ಟೈಂ ಸೆನ್ಸ್ ಇಲ್ಲ. ಹಿರಿಯರೊಬ್ಬರು ತಮ್ಮ ಜೀವನದ ಅನುಭವವನ್ನೆಲ್ಲ ಪಡೆದ ಮೇಲೆ ದೇವರಿಗೆ ಒಳ್ಳೆ ಸೆನ್ಸ್ ಆಫ್ ಹ್ಯೂಮರ್ ಇದೆ ಎಂದು ಕೇಳಿದರಂತೆ ಇಲ್ಲದಿದ್ದರೆ ಅದೆಷ್ಟು ವೈವಿಧ್ಯತೆ ಇದೆ ಸೃಷ್ಟಿಯಲ್ಲಿ. ಹತ್ತು ತಲೆ ರಾವಣ. ಆನೆ ತಲೆಯನ್ನು ಬಾಲಕನ ಶರೀರಕ್ಕೆ ('ಹೆವಿ' ಎನ್ನಬಹುದೆ?) ಅಂಟಿಸಿದ್ದು ಅಂದ್ರೆ ಗಣೇಶನ್ನ ಮಾಡಿದ್ದು, ಇತ್ಯಾದಿ ಸೃಷ್ಟಿಗಳು. ಆದ್ದರಿಂದ ನಾನು ನಾಸ್ತಿಕನಾಗಿಯೂ ಹೇಳುತ್ತೇನೆ. ದೇವರನೆಂಬುವನು ಇದ್ದರೆ ಅವನಿಗೆ ಸೆನ್ಸ್ ಇದ್ದೇ ಇದೆ. ಆದರೆ ಟೈಂ ಸೆನ್ಸ್ ಇಲ್ಲ. ಏಕೆ ಅಂತಿರಾ? ನೀವು ಯಾವುದಾದರೂ ಪುರಾಣದಲ್ಲಿ ಗಡಿಯಾರ ನೋಡಿದ್ದಿರಾ ? ರಾವಣ ಸತ್ತಾಗ ಎಷ್ಟು ಘಂಟೆ ಎಷ್ಟು ನಿಮಿಷ ಎಷ್ಟು ಸೆಕೆಂಡ್ ಯಾರಿಗಾದರೂ ಗೊತ್ತಾ' ನರರುಂಹನಿಂದ ಸತ್ತ ಹಿರಣ್ಯಕಶಿಪು ಮುಸ್ಸಂಜೆಯಲ್ಲಿ ಸತ್ತನೆಂಬುದು ಎಲ್ಲರಿಗೂ ತಿಳಿದಿದ್ದರೂ ಸರಿಯಾದ ಟೈಂ ಗೊತ್ತಾ? ರಾಮ ಕಾಡಿಗೆ ಹೋದಾಗ ಸರಿಯಾದ ಮುಹೂರ್ತ ನೋಡಿ ಹೋಗಿದ್ದಿದ್ದರೆ ಸೀತಾಪಹರಣವಾಗುತ್ತಿರಲಿಲ್ಲವೇನೊ? ನಮ್ಮ ನಿಮ್ಮ ಹಾಗೆ ದೇವರಿಗೆ ಸಮಯ ಪ್ರಜ್ಞೆ ಇಲ್ಲ (ಇಲ್ಲಿ ಟೈಂ ಸೆನ್ ಎಂಬರ್ಥದಲ್ಲಿ ಮಾತ್ರ ಉಪಯೋಗಿಸಿದ್ದೇನೆ ಹೊರತು ಪ್ರೆಸೆನ್ಸ್ ಆಫ್ ಮೈಂಡ್ ಅನ್ನುವ ಅರ್ಥದಲ್ಲಿಲ್ಲ) ದೇವರು, ನಾನು ತಿಳಿದ ಹಾಗೆ Leisurely ಪೀಪಲ್ ಅರ್ಥಾತ್ ಸೋಮಾರಿಗಳು. ಅವರಿಗೆ ಬೆಳಕು ಕತ್ತಲೆ ಎರಡೇ ಗೊತ್ತು. ನಮ್ಮ ಹಾಗೆ ನಿಮಿಷ ನಿಮಿಷಕ್ಕೂ ಬೆಲೆ ಇಲ್ಲ ಅಥವಾ ಗೊತ್ತಿಲ್ಲ.

ಎಷ್ಟೋ ಸುಖಗಳನ್ನು ದೇವರು ಕೊಡುತ್ತಾನೆ ಇನ್ನೇನು ಅವನ್ನ ಅನುಭವಿಸುವಷ್ಟರಲ್ಲಿ ಕಸಿದುಕೊಳ್ಳುತ್ತಾನೆ (ಆ ಸುಖವನ್ನೊ ಅಥವಾ ಸುಖಪಡಬೇಕಾದವನನ್ನು). ನಮ್ಮ ತಾತನ ಎದುರಿಗೆ ನಾಲ್ಕೈದು ಸಾವುಗಳಾದಾಗ ಜಗಲಿಮೇಲೆ

ಕುರಿತು ಅವರು ಹೇಳಿದ ಮಾತು ನನಗೆ ಈಗಲೂ ಜ್ಞಾಪಕವಿದೆ "ದೇವರಿಗೆ ಸ್ವಲ್ಪನೂ ಬುದ್ಧಿ ಇಲ್ಲ. ಯಾರನ್ನ ಮೊದಲು ಕರೆದುಕೊಳ್ಳಬೇಕು ಯಾರನ್ನ ಆಮೇಲೆ ಕರದುಕೊಳ್ಳಬೇಕು ಅಂತಾ ತಿಳಿಯೋಲ್ಲ! ನಾವೇ ವಾಸಿ ಎಲ್ಲಿ ಕಡೇನೂ 'ಕ್ಯೂ' ಫಾಲೊ ಮಾಡ್ತೀವಿ ಅಂತ ಹೇಳ್ತಿದ್ರು. ಬಹಳ ಸಂದರ್ಭದಲ್ಲಿ 'ಯಾವಾಗ ಯಾರಿಗ ಸಹಾಯ ಮಾಡಬೇಕು ಅಂತ ತಿಳಿಯೋದೇ ಇಲ್ಲ ದೇವರಿಗೆ!" ಎನ್ನುವ ಮಾತು ಕೂಡ ಅವನ ಲ್ಯಾಕ್ ಆಫ್ ಟೈಂ ಸೆನ್ಸ್ (Lack of Time Sence) ಕುರಿತೇ ಹೇಳಿದ್ದು.

ಟೈಂ ಸೆನ್ಸ್ ಹಾಗೂ ಟೈಂ ಮ್ಯಾನೆಜ್‌ಮೆಂಟ್ ಎಲ್ಲ ಕಲಿಯುಗದ ಕಲೆಗಳೇ ಎಂದು ನನ್ನ ಅಭಿಪ್ರಾಯ. ಇಲ್ಲದಿದ್ದರ (ಪಗಡೆ) ಒಂದಾಟಕ್ಕೆ 12 ವರ್ಷ ವನವಾಸ ಹೋಗಬೇಕಾ ? ಶ್ರೀರಾಮ 14 ವರ್ಷ ಕಾಡಿಗೆ ಹೋಗಬೇಕಾ ? Out of Power ಮಾಡಬೇಕಾದರೆ ಒಂದೈದು ವರ್ಷ ಸಾಲದೆ ? ಎಷ್ಟು ಜನ ತಿಪ್ಪರ ಲಾಗ ಹೊಡೆದರೂ ಮತ್ತೆ ರಾಜ್ಯಭಾರ ಮಾಡಕ್ಕಾಗುತ್ತೆ ? ಈ ವಿಚಾರಗಳೆಲ್ಲ ನಮ್ಮ ದೇವರಿಗೆ ಇನ್ನು ಹೊಳೆದಿಲ್ಲ ಎಂಬುದೇ ಸೋಜಿಗ.

ಈ ಲೇಖನವನ್ನು ಓದುವವನು ಖಂಡಿತ 'ದೇವ'ನಲ್ಲ ಎಂಬರಿವು ನನಗಿದೆ ಯಾದ್ದರಿಂದ ಇಲ್ಲಿಗೆ ಇದು ನಿಲ್ಲಿಸುವುದು ಕ್ಷೇಮ.

ಅನುಮಾನ

ನಿನ್ನ ಬಿಟ್ಟು
ಯಾರನ್ನು ನೋಡುವುದಿಲ್ಲ
ಎಂದು ಮಾತುಕೊಟ್ಟರು
ಅನುಮಾನ ನನ್ನಾಕೆಗೆ?
ಕಾರಣ,
ನನ್ನ ಕಣ್ಣು
ಮೆಳ್ಳಗಣ್ಣು

ಮುಂದಗೆರೆ ನಾಗೇಶ

17

ಶಾಲಿನಿ ಹುಟ್ಟಿದ್ದು ಎಂದು?

ಕೇಫ

ಹಿಂದೆ ನೀವು ಕೇಳಿದ್ದರೆ ಕ್ಷಮಿಸಿ–ಯಾರೋ ಒಬ್ಬ ಮುಟ್ಠಾ...ಐಮೀನ್ ದೊಡ್ಡ ಮನುಷ್ಯ ಒಬ್ಬ ಲಾಯರ್ ಹತ್ರ ಹೋಗಿ–ಲಾಯರೇ ನನಗೆ ಅರ್ಜೆಂಟ್ ಡೈವೋರ್ಸ್ ಕೊಡ್ಸಿ–ಅಂತ ಬೇಡಿಕೊಂಡನಂತೆ, ಆಗ ಲಾಯರು-ಯಾಕಪ್ಪ ? ಅಂತ ಕೇಳಿದರಂತೆ. ಅದಕ್ಕೆ ಆ ದೊಮ...ನೋಡಿಲಾಯರೇ, ನಂಗೆ ಮದುವೆ ಆಗಿ......"ಅಂತ ಶುರು ಮಾಡಿದ ತಕ್ಷಣ ಆ ಲಾಯರು-ಬಸ್, ಸಾಕು, ನೀವು ಮದುವೆಯಾಗಿದ್ದೀರಿ ಅನ್ನೋ ಒಂದೇ ಪಾಯಿಂಟ್‌ಸಾಕು ನಿಮಗೆ ಡೈವೋರ್ಸ್ ಪಡಕೊಳೋ ಕಾರಣಕ್ಕೆ-ಫೈವ್ ಹಂಡ್ರೆಡ್ ಅಡ್ವಾನ್ಸ್ ಪ್ಲೀಸ್-ಅಂದರಂತೆ. ನನಗೆ ಶ್ರೀಪತಿ-ಶಾಲಿನಿಗೊಂದಲ ನೆನಪಿಗೆ ಬಂದಾಗ್ಲೇಲ್ಲಾ ಈ ಜೋಕೂ ಜ್ಞಾಪಕಕ್ಕೆ ಬರುತ್ತೆ.

ಬಾಬು ನಾನು ಇಬ್ರೇ ಒಂದು ಮಧ್ಯಾಹ್ನ ನಮ್ಮ ಮೈಗಳ್ಳರ ಸಂಘದಲ್ಲೇ ಲಂಚ್ ಮುಗಿಸಿ ಸಂಘದ ಹಾಲಿನಲ್ಲಿ ಕೂತಿದ್ವಿ. ಬಾಬು ನನ್ನಹತ್ರ ಅವನ ತಮ್ಮಂದಿರು ಷಬ್ಬೀರ್ ಬಷೀರುಗಳ ಪ್ರಾಬ್ಲಮ್ಸ್‌ನ ಹೇಳ್ತಾ ಇದ್ದ. ಹುಣಸೂರು ಶೀನಿ ದಿಡೀರಂತ ನುಗ್ಗಿ ನಮ್ಮನ್ನ ನೋಡಿ-ನಮ್ಮ ಟೇಬಲ್‌ಹತ್ರಬಂದು-ನನ್ನಕಡೆ ತಿರುಗಿ-

"ಶೌರಿ ಎಲ್ಲಯ್ಯಾ ? " ಅಂತ ಕೇಳಿದ.

ಬಗ್ಗಿ ಒಂದುಬಾರಿ-ನಿನ್ನ ತಮ್ಮ ಶಬ್ಬೀರ್ ಎಲ್ಲಯ್ಯಾ ಪತ್ತೆ ಇಲ್ಲಾ ? ಅಂತ ಬಾಬೂನ ವಿಚಾರಿಸಿದ್ದಕ್ಕೆ ಬಾಬು-ತನ್ನ ಜೇಬುಗಳನ್ನೆಲ್ಲಾ ಶೋಧಿಸಿ-ನನ್ನ ಹತ್ರ ಶಬೀರ್ ಇಲ್ಲಾಪ್ಪಾ- ಅಂತ ಹೇಳಿದ್ದ. ಈಗ ನಾನು ನನ್ನ ಜೇಬನ್ನ ಜಪ್ತಿಮಾಡಿ- ಶೌರಿ ನನ್ನ ಹತ್ರ ಇಲ್ಲಾ ಶೀನಿ-ಅಂದೆ.

"ಪಾಂಡು–ಈ ಹಳಸಲು ಜೋಕ್ ಬೇಡ-ಸೀರಿಯಸ್ ಮ್ಯಾಟರಮ್ಮಾ-ಶ್ರೀಪತಿ ಬಂದಿದ್ದಾನೆ ನಂಜೊತೆ"-ಅಂದ ಶೀನಿ.

"ಲೋಪಾಂಡು-ಬಾಬು-ಮರೆತು ಬಿಟ್ರೇನ್ರೋ ನನ್ನನ್ನ ?" ಅಂತ ಮರುಕ್ಷಣ ಶ್ರೀಪತಿ ಕಾಣಿಸ್ಕೊಂಡ.

ಈ ಶ್ರೀಪತಿ ಬಗ್ಗೆ ನಿಮಗೆ ಒಂದೆ ಹೇಳಿದ್ದೇನೋ ಇಲ್ವೋ ಜ್ಞಾಪ್ಕ ಇಲ್ಲ ನಂಗೆ. ಶ್ರಿಪತಿ-ಇಟ್ಟಿಗೇಗೂಡು ದೂನುಗಳಲ್ಲೊಬ್ಬ. ಎಲ್.ಎಸ್.ನಲ್ಲಿ ಎರಡನೇಬಾರಿ ಫೇಲ್ ಆದಾಗ ತನ್ನ ಒರಿಜಿನಲ್ ಹೆಸರು-ಸುರೇಶ್‌ನ ನ್ಯೂಮರಾಲಜಿ ಪ್ರಕಾರ ಶ್ರೀಪತಿ ಅಂತ ಬದಲಾಯಿಸ್ಕೊಂಡ. ನಾವು ಮೂರು ನಾಲ್ಕು ದಪ ಫೇಲಾ ದೋರೆಲ್ಲಾ ನಮ್ಮ ಒರಿಜಿನಲ್ ಹೆಸರಿನಲ್ಲೇ ಸಾಧಿಸಿದೆವು. ಆಮೇಲೆ ಶ್ರಿಪತಿ ನಮ್ಮ ಜೊತೆ ಕುಂಟ್ತಾ ಎಡವ್ತಾ ಬಿ.ಎ. ಮಾಡ್ದ. ಬೆಂಗಳೂರಿನಲ್ಲಿದ್ದಾನೆ– ಬಿಸಿನೆಸ್ ಮನ್ ಆಗಿ. ಮದುವೆ ಯಾಗೋ ತನಕ ಬೆಂಗಳೂರಿನಲ್ಲಿ ರೇಸ್‌ಕೋರ್ಸ್‌ನಲ್ಲಿ ಸಿಕ್ತಿದ್ದ ಮೈಸೂರಿಗೆ ಬಂದಾಗ್ಲೂ ಮೈ. ಸಂ. ಕ್ಕೆ ಹಾಜರ್ ಹಾಕ್ತಿದ್ದ- ಮು... ಕ್ಷಮ್ಸಿ...

"ಯಾಕ್ರಯ್ಯ ನಿಮಗೆ ಶೌರಿ" ? ಕೇಳಿದೆ.

ಶ್ರೀಪತಿ ಶೀನಿ ಮುಖ ನೋಡಿದ.

"ಶೀನಿ-ಪಾಂಡೂಗೆ ಸಾಲೀ ವಿಷಯ ಹೇಳಿದ್ದಿಯಾ ?" ಅಂತ ಕೇಳಿದ.

ನಮ್ಮ ಮೈ. ಸಂ. ದ. ಟಾಪ್ ಐದು ಜನ ಮುಟ್ಠಾಳರಲ್ಲಿ ಹುಣಸೂರು ಶೀನಿ ಒಬ್ಬ ಅಂತ ನಿಮಗೆ ಗೊತ್ತಿರಬಹುದು. ಮಿಕ್ಕ ನಾಲ್ಕು ಜನ-ರಾಜ, ಚಂದಿ, ಭಾಗೀರತೀ ಚಿಕ್ಕಮ್ಮನ ಅಳಿಯ ಶ್ರೀಕಂಠ ಮತ್ತು ರಾಘಳ್ಳಿ ಈಗ ಈ ಶ್ರೀಪತಿನ ಫೈವ್ ಸ್ಟಾರ್ ಮುಟ್ಠಾಳ ಶೀನಿ ಟಾಪ್ ಮೇಲೆ ಕೂರಿಸಬೇಕಾಯ್ತು !

ನಾನು ಶೀನಿ ಮುಖ ನೋಡಿದೆ.

"ಇನ್ನೂ ಹೇಳಿಲ್ಲ-ಈಗ ಹೇಳೋಣ" ಅಂದ.

ಬಾಬು ನಮ್ಮೆಲ್ಲರಿಗೂ ಬೈ ಬೈ ಹೇಳಿ ಹೊರಟುಹೋದ-ಡೀಸೆಂಟ್ ಛಾಪ್, ಶೀನಿ ಮುಂದುವರೆದ.

"ಪಾಂಡು, ಶ್ರೀಪತಿ ವೈಫ್ ಶಾಲಿನಿ ಮಗೂನೂ ಕರ್ಕೊಂಡು ಒಂಟಿಕೊಪ್ಪಲಿಗೆ ಬಂದು ಬಿಟ್ಟಿದ್ದಾಳಂತಯ್ಯ...ನಂಗೇ ನಿಂಗೆ ಕ್ವಾರ್ಟರ್ ಕ್ವಾರ್ಟರ್ ಹೇಳು-ಶ್ರೀಪತಿ ಓನ್ಲಿ ಟಾಂಕೋ ಕುಡೀತಾನೆ"...

"ಟಾಂಕೋ ಅಲ್ವೋ ಇಡಿಯಟ್ ಲಿಮ್ಕಾ" ಅಂದ ಶ್ರಿಪತಿ.

ಮುತ್ತಣ್ಣ ಸರ್ವ್‌ಮಾಡ್ದ.

''ಶ್ರೀಪತಿ ವೈಫು ಚೈಲ್ಡು ಯಾಕೆ ಒಂಟಿಕೊಪ್ಪಲಿಗೆ ಬಂದಿರೋದು" ? ವಿಚಾರಿಸಿದೆ– ನಂಗೇನೂ ಅರ್ಥವಾಗದಿದ್ದರೂ. "ಶ್ರೀಪತಿ ಅವನ ವೆಡಿಂಗ್ ಡೇ ಮರೆತು ಬಿಟ್ಟಿದ್ದಾನೆ" ಅಂದ ಶೀನಿ

"ನೋ- ನನ್ನ ವೈಫ್ ಬರ್ತ್‌ಡೇನ" ಕರೆಕ್ಟ್‌ಮಾಡ್ದ ಶ್ರೀಪತಿ.

"ಅದಕ್ಕೇ ನಿನ್ನ ಶೌರೀನ ಹುಡುಕ್ಕೊಂಡು ಬಂದಿರೋದು. ಎಲ್ಲದಾನೆ ಶೌರಿ? ಮನೇಲಿರಲಿಲ್ಲ-ಲಾಕಾಗಿತ್ತು-"ಅಂದ ಶೀನು.

ಅರ್ಥವಾಯ್ತು, ಶೌರೀ ಆಗಾಗ ನನ್ನ ಮುಟ್ಠಾಳ ಸ್ನೇಹಿತರ ಪ್ರಾಬ್ಲಮ್ಸ್‌ನ ಸಾಲ್ವ್ ಮಾಡಿಕೊಡ್ತಾ ಪಾಪ್ಯುಲರ್ ಆಗಿದ್ದಾನೆ. ನಂಗೆ ಸ್ವಲ್ಪ ಹೊಟ್ಟುರಿ ಇದ್ರೂ- ಆ ಬೆಳಗಿನ ಝಾವ ಊರ್‌ನೋರನ್ನೆಲ್ಲಾ ಎಬ್ಬಿಸ್ತಿದ್ದ ಹುಂಜದ ಓನರ್ ಮುದುಕೀ ಥರಾ ನಂಗೂ ಸ್ವಲ್ಪ ಜಂಭವೂ ಇದೆ, ಆದರೆ...

"ಶ್ರೀಪತಿ-ನಿನ್ನ ಪ್ರಾಬ್ಲಮ್ ಏನು ಹೇಳು-ನಿನ್ನ ಮಾತ್ನಲೇ" ಅಂದೆ.

ಶೀನಿ-ಪಕ್ಕದ ಟೇಬಲ್‌ನಲ್ಲಿ ಜಮಾಯಿಸ್ಕೊಂಡಿದ್ದ ಪೀಟರ್‌ಗ್ಯಾಂಗನ್ನ ಸೇರಿಕೊಂಡ

ಶ್ರೀಪತಿ-ಲಿವ್‌ಕಾ ಸಿಪ್‌ಮಾಡ್ತಾ ಶುರುಮಾಡ್ದ-"ನಾನೂ ಶಾಲಿ ಮದುವೆ ಯಾದಾಗ್ಲಿಂದ ತಪ್ಪಿ ನಮ್ಮ ವೆಡಿಂಗ್ ಡೇ-ಶಾಲಿ ಬರ್ತಡೇ ಪಿಂಕಿ ಬರ್ತ್‌ಡೇ......
"ಪಿಂಕಿ ಯಾರು ?

"ನನ್ನ ಡಾಟರು-ತಪ್ದೇ ಸೆಲಿಬ್ರೇಟ್ ಮಾಡ್ತೇವಯ್ಯ"—
"ನಿನ್ನ ಬರ್ತ್‌ಡೇ ?

"ಡೇಟ್ ಮಾತ್ರ ಗೊತ್ತಿದೆ-ಮಂತು ಇಯರು ಗೊತ್ತಿಲ್ಲ......ಈವರ್ಷ ವೆಡಿಂಗು ಶಾಲಿ ಬರ್ತ್‌ಡೇ-ಮರ್ತ್ಹೋಗಿದೆಯಯ್ಯಾ-ನಾನು ನೆನಪು ಮಾಡಿಕೊಂಡು ಪ್ರೆಸೆಂಟ್ ತಕೊಂಡು ಹೋಗಿ ವೈಫ್‌ನ ಡಾಟರ್‌ನ ಕರ್ಕೊಂಡು ಹೋಗ್ಬೇಕು– ಮನೆಗೆ"–

"ಈಗ ಬರೋದು ಬರ್ತ್‌ಡೇನೊ ವೆಡಿಂಗ್‌ಡೇನೊ ?"

"ಅದೇ ಮರ್ತ್ಹೋಗಿದೆಯಯ್ಯಾ......

ಶೀನಿ ಹೊಸಾಗ್ಲಾಸ್ ಹಿಡ್ಕೊಂಡು ವಾಪಸ್ ಬಂದ.

"ಶ್ರೀಪತಿ- ಬರ್ತ್‌ಡೇನೋ ವೆಡಿಂಗ್‌ಡೇನೋ ಅದೂ ಜ್ಞಾಪ್ಕಾಇಲ್ಲಾಂದ್ರೆ ಯಾವ ರೀತೀನೋ ನಿನ್ನ ತಲೆ ? ಸ್ವಲ್ಪ ಖಾರವಾಗಿ ಕೇಳಿದೆ.

"ಇವನ ಬ್ರೈಯಿನ್ ಪೂರ್ತಿ ಬ್ಲಾಂಕಯ್ಯ "ಅಂದ ಶೀನಿ.

"ವೆಡಿಂಗ್ ಇನ್‌ವಿಟೇಷನ್ ಇಲ್ವೇನು" ? ಶೌರೀ ತಲೇ ಮೇಲೆ ಹೊಡಿಯೋ ಥರಾ ಕೇಳಿದೆ.

"ಶ್ರೀಪತಿ ಶಾಲಿನೀದು ಲವ್‌ಮ್ಯಾರೇಜು–ನಂದೂ ಕುಸುಮ್‌ದೂ ಆದ ಹಾಗೆ ಆದ್ರೆ ಇವರಿಬ್ರೂ ಅಬ್ಸ್‌ಕಾಂಡಾಗಿ ಪೆರಿಯಾ ಪಟ್ಟಣದಲ್ಲಿ ಆಂಜನೇಯನಗುಡೀಲಿ ಮದುವೆಯಾದರು-" ಶೀನ ವಿವರಿಸಿದ.

"ಮಾರುತಿ ಟೆಂಪಲ್ಲು" ಶ್ರೀಪತಿ ಸೇರಿಸಿದ-ಹಾರ್ಡಿಗೊಬ್ಬ ಲಾರೆಲ್‌ಥರಾ.

"ಅದಕ್ಕೇನಯ್ಯಾ ಶೌರೀ ಬೇಕಾಗಿದ್ದುದ್ದು-ಎಲ್ಲವನು ?"

"ಶೌರಿ ಗಾನ್ ಟು ಹೆಗ್ಗಡದೇವನಕೋಟೆ ಒನ್ ವೀಕ್ಸ್ ಲೀವ್ ಮಿಸ್ಟರ್ ಶ್ರೀನಿವಾಸರಾವ್ !" ಮರ್ಯಾದೆಯಿಂದ ಹೇಳಿದೆ.

"ಅದನ್ಯಾತಕ್ಕಯ್ಯ ಮೊದ್ಲೇ ಹೇಳ್ಲಿಲ್ಲ-ಶ್ರೀಪತಿ ಪುರಾಣ ಕೇಳೋಕೆ ಮೊದ್ಲೆ?"

"ಯಾಕಯ್ಯ ಹೇಳ್ಬೇಕು? ಶೌರೀಗೊಬ್ಬನಿಗೇನೇನು ತಲೇಲಿ ಕರುಳಿರೋದು?"

"ಕರುಳಲ್ಲ ಮೆದುಳು"- ಅಂದ ಶ್ರೀಪತಿ

"ಎರಡೂ ಒಂದೇ-ಇರಲಿ ಶ್ರೀಪತಿ-ನೀನು ಚಿಂತಿಸಬೇಡ, ರಾತ್ರಿ ಊಟ ಇಲ್ಲೇ ಮುಗಿಸಿ ನೇರ ಮನೆಗೆ ಹೋಗೋಣ, ಯಾರ ಡಿಸ್ಟರ್ಬೆನ್ಸೂ ಇಲ್ಲ, ಕೂಲಾಗಿ ನಿನ್ನ ಪ್ರಾಬ್ಲಂ ಸಾಲ್ವ್ ಮಾಡೋಣಾ ಶೀನೀನ ನಂಬಿದರೆ ಏನೂ ಆಗೊಲ್ಲ"-

ಶೀನಿ ನನ್ನ ಮುಖ ನೋಡ್ತಾ ಬುಸುಗುಟ್ತಾ ತನ್ನ ಗ್ಲಾಸ್ ಹಿಡ್ಕೊಂಡು ಪಕ್ಕದ ಟೇಬಲ್‌ಗೆ ಹೋದ, ನಾನೂ ಶ್ರೀಪತಿ ಊಟ ಮುಗಿಸಿ ಮನೆ ಸೇರಿದೆವು. ಶೌರಿ ರಜದ ಮೇಲೆ ಹೋದಾಗಲೆಲ್ಲಾ ಅವನ ಭಾವ ಹೆಗ್ಗಡದೇವನಕೋಟೆ

ಅಖಿಲಾಂಡಯ್ಯನ ಮಗ ಅಕಿಲಾಂಡೀನ ಅಥವಾ ನನ್ನ ಬುಲ್ ಬುಲ್ ತರಂಗ ಗುರು ತಿಪ್ಪಣ್ಣನ ಆಂಟೀಮಗ ಉಜ್ಜಿನಪ್ಪನ ನನ್ನಸೇವೆಗೆ ಬಿಟ್ಟುಹೋಗ್ತಾನೆ. ಉಜ್ಜಿನಪ್ಪನೇ ಘಂಟಾಘೋಷ ಪೇಪರ್ ಎಡಿಟರು. ಈ ಬಾರಿ ಉಜ್ಜನಪ್ಪ ಇದ್ದ. ಪ್ರಾಯಶಃ ಪ್ರಪಂಚದಲ್ಲೆಲ್ಲಾ ಒಬ್ಬ ಪತ್ರಿಕಾ ಸಂಪಾದಕನ್ನ ತನ್ನ ಸೇವೇಲಿ ಇಟ್ಕೊಳೋ ಆಸಾಮಿ ನಾನೊಬ್ಬನೇ ಇರ್ಬೇಕು– ಇರಲಿ.........

"ಶ್ರೀಪತಿ–ಬಾ ಕೂತ್ಕೊ–ಸೀರಿಯಸ್ಸಾಗಿ ನಿನ್ನ ಪ್ರಾಬ್ಲಂ ಸಾಲ್ವ್ ಮಾಡೋಣ ನಿಜ ಹೇಳೋದಾದ್ರೆ ಶೌರಿ ಟ್ಯೂಟರೇ ನಾನು. ಸರಿಯಾದ ಮೆಥಡ್ನೇ ಉಪ ಯೋಗಿಸಿ ನಿನ್ನ ವೈಫ್ ಬರ್ತ್‌ಡೇ ಫಿಕ್ಸ್ ಮಾಡಿ ಬಿಡೋಣ" ಅಂದೆ.

"ಜೊತೆಗೆ ನಮ್ಮ ವೆಡಿಂಗ್ ಡೇ ನೂ'

ಶೀನು ಕೇವಲ ಮುಟ್ಠಾಳನಾದ್ರೆ ಶ್ರೀಪತಿ–ಆದಿಮೂರ್ತೀನೇ !

'ಆಲ್‌ರೈಟ್–ನಿನ್ನ ಪ್ರಾಬ್ಲಂನ ಮೊದಲಿಂದ ಹೇಳು–'

"ಪಾಂಡು ನನ್ನ ಪ್ರಾಬ್ಲಂ ಸಿಂಪಲ್ಲು. ಆದ್ರೆ ಟೆರಿಬಲ್ಲು. ನಂದೂ ನನ್ನ ವೈಫ್‌ದೂ ಲವ್ ಮ್ಯಾರೇಜು–ಒಂದೇ ದಿನ ಒಂದೇ ಟೈಮ್‌ನಲ್ಲಿ–"

"ಒಂದೇ ಜಾಗದಲ್ಲಿ–"

"ಯಸ್–ಪೆರಿಯಾಪಟ್ಟಣದ ಮಾರುತಿ ಟೆಂಪಲ್‌ನಲ್ಲಿ ಐದಾರು ವರ್ಷಗಳ ಕೆಳಗೆ ನಡೀತು. ಆವಾಗ್ಲಿಂದ ನನ್ನ ವೈಫ್ ಬರ್ತ್‌ಡೇ–ವೆಡಿಂಗ್‌ಡೇ ತಪ್ಪದೇ ಅಬ್‌ಸರ್ವ್ ಮಾಡ್ತಿದ್ವು–ನಂಗೇ ಜ್ಞಾಪಕಕ್ಕೆ ಬರೋದು. ಹೋದ ವರ್ಷ ಎರಡೂ ಮರೆತು ಬಿಟ್ವೆ"

"ಟೆಂಕ್ರೀದು ?"

"ಪಿಂಕೀ– ಡಾಟರ್‌ದು ಅವ್ಮ ಜ್ಞಾಪಿಸ್ತಾಳೆ–ಹೋದವರ್ಷ ಮನೇಲಿ ನರಕ ಅನುಭವಿಸಿ ಬಿಟ್ಟೆ. ಮೊನ್ನೆ ಶಾಲಿನಿ-ಪಿಂಕಿ ಸಮೇತ ಬಟ್ಟೆ ಬರೆ ಪ್ಯಾಕ್ ಮಾಡ್ಕೊಂಡು ಒಂಟಿಕೊಪ್ಪಲ್‌ಗೆ ಬಂದು ಬಿಟ್ಲು. ನಾನು ಪ್ರೆಸೆಂಟ್ ತಕೊಂಡು ಬಂದು ಕರ್ಕೊಂಡು ಹೋಗ್ಬೇಕಂತೆ"

"ಹಾಗೇ ಮಾಡು–ಪ್ರೆಸೆಂಟ್ ತಂದು ಬಿಡು"

"ಪಾಂಡು ನಿಂಗೆ ಮದುವೆ ಆಗಿದೆಯೆ ?

"ಇಲ್ಲ–"

"ಸರಿ ನಿಂಗೊತ್ತಾಗೊಲ್ಲ ಬಿಡು–ಯಾವುದಕ್ಕೆ ಅಂತ ಪ್ರೆಸೆಂಟ್ ಕೊಡಲಿ ? ಇಂಥಾದಕ್ಕೆ ಅಂತ ಹೇಳಿಕೊಡ್ದೇ ಹೋದ್ರೆ ಡೈವೋರ್ಸ್ ತಕೊಳೋಕೂ ಹಿಂಜರಿಯೊಲ್ಲ ಶಾಲಿ–"

"ಒಳ್ಳೇದೇ ಆಯ್ತು–ಐಮೀನ್–ನೀನು ಡೈರಿ ಬರೆದಿಟ್ಟಿಲ್ವೆ?"

"ನನ್ನ ಡೈರಿಗಳನ್ನೆಲ್ಲಾ ಎಲ್ಲೋ ಮುಚ್ಚಿಟ್ಟಿಬಿಟ್ಟಿದ್ದಾಳಯ್ಯಾ – ಕ್ರೂಕು–ಐಮೀನ್–ತುಂಬಾ ಇಂಟೆಲಿಜೆಂಟು ನನ್ನ ವೈಫು."

"ಅಯ್ಯೋಪಾಪ" ಅಂದುಕೊಂಡೆ ಮನಸ್ಸಿನಲ್ಲೇ

"ಶ್ರೀಪತಿ–ಸ್ವಲ್ಪ ಡೀಪಾಗಿ ಥಿಂಕ್ ಮಾಡು ನಿನ್ನ ಮದುವೆ ನಡೆದದ್ದು ಯಾವ ಸೀಸನ್ನು – ನಿನ್ನ ವೈಫ್ ಬರ್ತ್‌ಡೇ ಬರೋದು ಯಾವ ಸೀಜನ್ನು ?"

ಶ್ರೀಪತಿ ಆಳವಾಗಿ ಯೋಚಿಸ್ದ

"ಒಂದು ಬೇಸಿಗೇಲಾಯ್ತು–ಒಂದು ಛಳಿಗಾಲದಲ್ಲಾಯ್ತು–ಆದ್ರೆ ಯಾವ್ದು ಯಾವಕಾಲದಲ್ಲಾಯ್ತು ಅನ್ನೋದು ಮರೆತು ಹೋಗಿದೆ"

"ಶ್ರೀಪತಿ–ನನಗೆ ನಿನ್ನಿಂದ ತುಂಬಾ ಹೆಲ್ಪ್ ಆಗ್ತಾ ಇದೆ ಕಣೋ"

"ಪಾಂಡು–ಇದು ಜೋಕಿಂಗ್ ವಿಷಯ ಅಲ್ವಯ್ಯಾ–ನನಗೆ ಎರಡೂ ಜ್ಞಾಪ್ಕಕ್ಕೆ ಬರದೇ ಹೋದರೆ ನನ್ನ ಫ್ಯೂಚರೇ ಬ್ಲಾಂಕಯ್ಯಾ–"

ಫ್ಯೂಚರ್ ! ಭವಿಷ್ಯ !

ಆರ್ಕಿಮಿಡೀಸ್‌ಥರಾ ಬಟ್ಟೆ ಎಲ್ಲಾ ಬಿಸಾಡಿ ಕೂಗಿಬಿಡ್ಲೇ ಎನ್ನಿಸಿತು.

"ಶ್ರೀಪತಿ!" ಅಂತ ಕಿರುಚಿದೆ

"ಏನು?" ಅಂದ ಗಾಬರಿಯಿಂದ.

"ಭವಿಷ್ಯ! ಯಾವುದಾದರೂ ಮ್ಯಾಗಜೀನ್ ನೋಡೋಣ. ಅದರಲ್ಲಿ ಪ್ರತಿಯೊಬ್ಬರದೂ ರಾಶಿಫಲ ಕೊಟ್ಟಿರ್ತಾನೆ–ತಿಂಗಳು ಲೆಕ್ಕದಲ್ಲಿ ನಿನ್ನ ವೈಫ್‌ಗೆ

ಯಾವುದು ಸರಿ ಹೋಗುತ್ತೆ – ಆ ತಿಂಗಳಲ್ಲಿ ಬರ್ತ್‌ಡೇ ಡೇಟ್ ಆಮೇಲೆ ಫಿಕ್ಸ್ ಮಾಡೋಣಾ–"

"ಸ್ಪ್ಲೆಂಡಿಡ್ ಪಾಂಡು ನೀನು ನಿಜವಾಗಿ ಜೀನಿಯಸ್ ಕಣೋ ಈಗ್ಲೇ ತಂದು ಬಿಡ್ತೀನಿ ಮ್ಯಾಗಜೀನನ್ನ" ಅಂತ ಎದ್ದ.

"ಶ್ರೀಪತಿ–ಈಗ ನಿಶ್ಚಿಂತೆಯಿಂದ ನಿದ್ರೆ ಮಾಡು. ನಾಳೆ ಮಾರ್ನಿಂಗ್ ನಾನೂ ನೀನೂ ಕೂತ್ಕೊಂಡು ಕಾಮಾಗಿ ನೋಡೋಣ" ಅಂತ ಹೇಳಿ ಅವನಿಗೆ ಮಲಗೋಕೆ ಏರ್ಪಾಟು ಮಾಡಿದೆ.

ನಂಗೆ ಈ ಭವಿಷ್ಯದಲ್ಲಿ ಅಷ್ಟಾಗಿ ನಂಬಿಕೆ ಇಲ್ಲ. ನಮ್ಮ ಪೆಂಕುಭವಿಷ್ಯದಲ್ಲಿ ಸಮುದ್ರಯಾನ ಅಂತ ಬರೆದಿದೆಯಂತೆ, ಅವನು ಶಿವನ ಸಮುದ್ರಕೂಡ ನೋಡಿಲ್ಲ, ಆದರೂ–ಭವಿಷ್ಯದ ಕಾಲಮ್ ಓದ್ತಾ ಓದ್ತಾ ಶ್ರೀಪತಿಗೆ ಯಾವುದಾದರೂ ಒಂದು ಜ್ಞಾಪಕ ಬಂದ್ರೂ ಬಂದುಬಿಡಬೋದು–ಅಂತ ನನ್ನ ಮನಸ್ಸಿನಲ್ಲಿತ್ತು. ಮರುದಿನ ಉಜ್ಜನಪ್ಪ ನನ್ನ ಎಬ್ಬಿಸಿ ಕಾಫಿ ಕೊಡೋ ಹೊತ್ತಿಗೆ–ಶ್ರೀಪತಿ ಒಂದು ಮ್ಯಾಗಜೀನ್ ನೋಡ್ತಾ ಹಾಲಿನ ಸೋಫಾ ಮೇಲೆ ಕೂತಿದ್ದ, ಸರಿಯಾದ ಮ್ಯಾಗಜೀನ್ನೇ ತಂದಿದ್ದ ವರ್ಷ ಭವಿಷ್ಯವೇ ಇತ್ತು.

ಇಬ್ರೂ ಭವಿಷ್ಯ ಪಠಣ ಶುರುಮಾಡಿದೆವು.

ಮಾರ್ಚ್ 21ರಿಂದ ಏಪ್ರಿಲ್ 20ರವರಿವಿಗೆ– ತುಂಬಾನಿಷ್ಠುರ ಪ್ರಕೃತಿ ಯುವರು ಬೆಂಕಿಯಿಂದ ಭಯ......

"ಪಾಂಡು ಇದೇ ಶಾಲಿನಿ ಬರ್ತಡೇ ಮಂತ್ ಇರ್ಬೇಕಯ್ಯ...ಅಂದ ಶ್ರೀಪತಿ

ನಾನು ಮುಂದುವರಿಸಿದೆ.

ಏಪ್ರಿಲ್ 21ರಿಂದ ಮೇ 20ರ ವರಿವಿಗೆ–ತುಂಬಾ ಕಡಾಖಂಡಿತಾದಿಗಳು–ಶತ್ರುಗಳ ಮೇಲೆ ಜಯ-ನೀರಿನಿಂದ ಭಯ......

"ಪಾಂಡು–ಬಿಲ್‌ಖುಲ್ ಶಾಲಿನಿ ! ಅವಳಿಗೆ ನಿತ್ಯ ನೀರು ಬರುತ್ತೋ ಇಲ್ವೋ ಅನ್ನೋದೇ ಚಿಂತೆ–"

ನಾನು ಮುಂದುವರಿಸಿದೆ.

ಮೇ 21ರಿಂದ ಜೂನ್ 20ರವರಿವಿಗೆ– ಮಿತಭಾಷಿಗಳು ಮತ್ತೊಬ್ಬರ ಮನಸ್ಸನ್ನು ಕೂಡಲೇ ಗ್ರಹಿಸುವವರು ವಾಹನ ಭಯ......

"ಸ್ಫೂರ್ತಿ ಶಾಲಿನಿ–ಗೊಣಗಿದ ಶ್ರೀಪತಿ.

ಜೂನ್ 21ರಿಂದ ಜುಲೈ 20ರ ವರಿವಿಗೆ ತಮ್ಮ ಯಾವ ಕಾರ್ಯದಲ್ಲಿ ಕಿಂಚಿತ್ ಆಸಕ್ತಿ ತೋರಿಸದವರು–ಬೇರೊಬ್ಬರ ದುರ್ಬಲವನ್ನು ಸಹಿಸಲಾರರು–ಯಾವ ವಿಷಯದಲ್ಲೂ ಛಲ ಸಾಧಿಸುವ.........

"ಪಾಂಡು ಓಂವೆ ಓದಿದ್ದೆಲ್ಲಾ ಒಂದು ತೂಕ–ಇದೇ ಒಂದು ತೂಕ ಪಾಂಡು-ಶಾಲಿನಿ ಹುಟ್ಟಿದ್ದು ಜೂನ್ ಆರ್ ಜುಲೈ......ನೋ ಡೌ ಟ್ ಬೌ ಟಿ ಟ್"–

ಜುಲೈ 21ರಿಂದ ಆಗಸ್ಟ್20ರ ವರಿವಿಗೆ...ವಿಪರೀತ ಅನುಮಾನ ಸ್ವಭಾವ–ಯಾರನ್ನೂ ನಂಬಲಾರರು...ಸಾವಿರತಲೆ ಆಹುತಿ ತೆಗೆದುಕೊಂಡ ಅಪೂರ್ವ ಚಿಂತಾಮಣಿಯಂತಹವರು......

"ಸ್ಟಾಪ್"! ಅಂತ ಅರಚುತಾ ಶ್ರೀಪತಿ ನನ್ನ ಕೈಯಿಂದ ಮ್ಯಾಗಜೀನ್ ಕಿತ್ತುಕೊಂಡು ಚೂರುಚೂರು ಮಾಡಿದ-

"ಪಾಂಡು ಈ ಮ್ಯಾಗಜೀನ್ ಪ್ರಕಾರ ಶಾಲಿನಿ ಪ್ರತಿ ತಿಂಗಳಲ್ಲೂ ಹುಟ್ಟಿರ ಬೇಕಾಗಿತ್ತಯ್ಯ-ನಿನ್ನನ್ನ ನಂಬಿಕೊಂಡು ಬಂದು ನಾನು ಕೆಟ್ಟೆ–ಬೇರೆ ಏನಾದ್ರೂ ಪ್ಲಾನ್ ಹೇಳಯ್ಯ"...ಅಂದ.

ಏನೋ ಫ್ಲಾಷ್ ಆಯ್ತು-

"ಶ್ರೀಪತಿ ಹೋದಬಾರಿ ನಿನ್ನ ವೈಫ್‌ಬರ್ತ್‌ಡೇಗೆ ನೀನು ಏನು ಪ್ರೆಸೆಂಟ್ ಕೊಟ್ಟೆ ಜ್ಞಾಪ್ಕ ಇದೆಯಾ ?

"ಓಯಸ್–ಒಂದು ವ್ಯಾನಿಟಿಬ್ಯಾಗ್ ಕೊಟ್ಟೆ"

"ಸ್ಪ್ಲೆಂಡಿಟ್ ಶ್ರೀಪತಿ-ಅದನ್ನು ಕೊಂಡು ಕೊಂಡಿದ್ದಕ್ಕೆ ರಶೀತಿ ತೆಗಿ" !

"ಅದೇ ಇಲ್ಲ ಪಾಂಡು ನಮ್ಮ ಆಫೀಸ್ ಟೈಪಿಸ್ಟ್ ಹತ್ರ ಕೊಂಡುಕೊಂಡಿದ್ದು ಆಕೆ ವೆಡಿಂಗ್‌ನಲ್ಲಿ ಮೂರತ್ತೆರಡು ಬ್ಯಾಗ್ಸ್ ಬಂದಿದ್ದವಂತೆ, ಒಂದೊಂದಾಗಿ ಮಾರ್ತಾ ಇದ್ಲು ಕ್ಯಾಷ್ ಕೊಡ್ಲಿಲ್ಲ– ಸಂಬಳದದಿನ ಕೊಟ್ಟಿದ್ದು"

"ಆಕೆ ಮದುವೆ ಡೇಟು" ?

"ಮೂರು ವರ್ಷದ ಹಿಂದೆ ಆಗಿತ್ತು-ಡೈವೋರ್ಸ್"

ಈ ಮುಟ್ಠಾಳನನ್ನೂ ವೈಫ್ ಡೈವೋರ್ಸ್ ಮಾಡಿ ಬಚಾವ್ ಆಗೋದು ಮೇಲು ಎನ್ನಿಸಿತು. ಮಧ್ಯಾಹ್ನ ಸಂಘಕ್ಕೆ ಕರ್ಕೊಂಡು ಹೋದೆ.

"ಲಿಮ್ಕಾ ಬೇಡಯ್ಯ ಸ್ಟ್ರಾಂಗ್ ಡ್ರಿಂಕ್ ಯಾವುದಾದ್ರೂ ತರ್ಸು" ಅಂದ.

ಮುಂದೆ ಶ್ರೀಪತಿ ಅವಸ್ಥೆ ವೈಗಳ್ಳರ ಸಂಘದ ಸದಸ್ಯರನ್ನೆಲ್ಲರನ್ನೂ ಒಂದಲ್ಲಾ ಒಂದು ರೀತೀಲಿ ಪೀಡಿಸೋಕೆ ಶುರುಮಾಡ್ತು. ಈ ಶ್ರೀಪತಿ ವೈಫ್ ನಮ್ಮ ಪಿ. ಎಂ. ಆದ್ರೂ ಆಗಬಾರದಾಗಿತ್ತೇನಯ್ಯ ? ಆಗ ಅವಳ ಬರ್ತ್‌ಡೇ ದೇಶಾದ್ಯಂತ ಸೆಲಿಬ್ರೇಟ್ ಆಗೋದು-ಅಂತ ಫೈರ್ ಸ್ಪಾರ್ ಮುಟ್ಠಾಳ ರಾಘಣ್ಣ ಕೂಡ ಫೀಲ್ ಮಾಡಿದ. ಶ್ರೀಪತಿ ಸ್ಥಿತಿ ನೋಡಲಾರದೆ ಬಾಬು ಬಗ್ಗೆ ಪೀಟರ್ ಫಾಸ್ಟ್‌ಬೌಲರ್ ಶಿಂಗ್ರೈಯಂಗಾರಿ–ಟೆಪ್ಸಿ–ಎಲ್ರೂಸೇರಿ ಕ್ವಾರ್ಟರು ಹಾಫು ಫುಲ್ಲು ಅಂತ ಅವನಿಗೆ ಕುಡಿಸ್ತಾ ಕುಡಿಸ್ತಾ–ಅವನ್ನ ಅರ್ಧ ನಿದ್ರಾವಸ್ಥೇಲೇ ಇಟ್ಟಿದ್ರು.

ಶೌರಿ ಹೆ.ಕೋ. ಯಿಂದ ವಾಪಸ್ ಬಂದ-ನೇರವಾಗಿ ನಾನಿದ್ದ ಸಂಘಕ್ಕೆ ಬಂದು ಗೇಟಿನ ಬಳಿ ಕಾಣಿಸ್ಕೊಂಡನೋ ಇಲ್ವೋ–ಶೀನಿ ಓಡಿಹೋಗಿ ಅವನ್ನ ಬೇವಿನ ಮರದಡಿಗೆ ಎಳ್ಕೊಂಡು ಹೋಗಿ ಶ್ರೀಪತಿ ಸಮಸ್ಯೇನ ಪೂರ್ತಿ ವರದಿಮಾಡಿ ಬಿಟ್ಟ.

"ಪಾಂಡು-ನೀನಿನ್ನು ರೆಸ್ಟ್‌ತಕೋ. ಶ್ರೀಪತಿ ಕೇಸ್‌ನ ಶೌರಿ ಹ್ಯಾಂಡಲ್ ಮಾಡ್ತಾನಂತೆ–"ಅಂತ ಹೇಳಿ ನನ್ನನ್ನ ರಿಲೀವ್ ಮಾಡಿದ.

ನನಗೂ ಆರಾಮ್ ಬೇಕಾಗಿತ್ತು. ಶ್ರೀಪತಿ ಪಡ್ತಿದ್ದ ಅವಸ್ಥೆನೋಡಿ ಮ್ಯಾರೇಜ್ ಏನಿದ್ರೂ ಲೇಡೀಸ್‌ಗೇ ವಿನಹ ಮೆನ್‌ಫೋಕ್ ಜನ್ಮ ಜನ್ಮೇಪಿ ಆ ಹುಚ್ಚು ಸಾಹಸ ಮಾಡಬಾರ್ದು ಅನ್ನೋ ಅಭಿಪ್ರಾಯಕ್ಕೆ ಬಂದಿದ್ದೆ. ಮೂರುದಿನಗಳಿಂದ ಕಳ್ಕೊಂಡಿದ್ದ ಶಾಂತೀನ ಪುನಃ ಪಡಕೋಳೊಕೆ ಬಾಬು ಜೊತೆ ಎರಡು ದಿನ ಬೆಂಗಳೂರು ಸುತ್ತಿ ನಗರಕ್ಕೆ ವಾಪಸ್ ಬಂದೆ.

ಶೌರಿ ಬಿಸಿ ಬಿಸಿ ಕಾಫಿ ತಂದ. ನಾನೂ ಸ್ವಲ್ಪ ಹಗುರವಾದ ಮೂಡ್‌ನಲ್ಲಿದೆ. ಮಿಸ್ಟರ್ ಎಂಡ್ ಮಿಸೆಸ್ ಶ್ರೀಪತಿ ರೀವೆಡಿಂಗ್ ಆಯ್ತಾ ಶೌರಿ ? ಕೇಳಿದೆ-ಸ್ವಲ್ಪ ಇದಾಗಿ.

"ಸರ್" ?

"ಶ್ರೀಪತಿ ಮತ್ತು ಅವನ ವೈಫ್ ವಿಷಯ ಎಲ್ಲಿಗೆ ಬಂತು ? ನಿನ್ನ ಮೇಲೇ ಡಿಪೆಂಡ್ ಆಗಿತ್ತು"......

"ಬುಧವಾರ ಅವರ ವೆಡಿಂಗ್ ಆನಿವರ್ಸರಿ ಡಿನ್ನರ್-ದಾಸ್ ಪ್ರಕಾಶ್‌ನಲ್ಲಿ ಅರೇಂಜ್ ಮಾಡಿದಾರೆ"......

ಷಹಬಾಸ್-ಅಂದ್ರೆ ನಾನು ಅಡ್ವೈಸ್ ಮಾಡಿದ ಹಾಗೆ ಪ್ರೆಸೆಂಟ್ ಮಾಡಿಬಿಟ್ರು...ಅನ್ನು"...

"ಬಿಲ್ ಖಿಲ್ ಸರ್-ಆದ್ರೆ ತಕೊಂಡು ಹೋಗಿ ಕೊಟ್ಟಿದ್ದು ನಾನು-ಷೇಫರ್ ಪೆನ್ ಸೆಟ್‌ನ"...

"ಪೆನ್ ಸೆಟ್ ಯಾಕೆ ಮಿಸೆಸ್ ಶ್ರೀಪತಿಗೆ" ?

"ಶಾಲಿನಿಬಾಯಿ-ಅವರು ಒಳ್ಳೆ ಬರಹಗಾರರು ಸರ್- "ವೈತರಿಣಿ''-ಹೆಸರಿನಲ್ಲಿ ಸಣ್ಣ ಕಥೆಗಳನ್ನ ಬರೀತಾರೆ-

"ನಾನು ನೆನೆಸಿದ ಹಾಗೆ ಸಡನ್ನಾಗಿ ಜ್ಞಾಪಕಕ್ಕೆ ಬಂತು ಅನ್ನು"

"ಬಂದಿರೋದು ಸರ್ ನಾನು ಪ್ರೆಸೆಂಟ್ ಕೊಟ್ಟ ತಕ್ಷಣ ಅವರು ಕೇಳಿದರು-ಅವರೆಲ್ಲಿ? ಅಂತ. ನಮ್ಮ ಮನೇಲಿದ್ದಾರೆ. ಸ್ವಲ್ಪ ಟ್ರಾವಲ್ ಸುಸ್ತು ಮಲಗಿದ್ದಾರೆ-ಅಂದೆ. ಈ ಪ್ರೆಸೆಂಟ್ ಏಕೆ ಅಂತ ಹೇಳಿ ಕಳ್ಸಿದರು ?-ಅಂತ ಕೇಳಿದರು ಶಾಲಿನಿ ಅವರು, ನೀವೆ ಹೇಳಿ-ಸರಿಯಾಗಿ ಹೇಳಿಬಿಟ್ರೆ ನಿಮಗೆ ಇಪ್ಪತ್ತು ರೂಪಾಯಿ-ತಪ್ಪು ಹೇಳಿದರೆ ನಂಗೆ ನೀವು ಕೊಡ್ಬೇಕು-ಅಂತ ಸವಾಲ್ ಹಾಕಿದೆ."

"ಆಮೇಲೆ ?–ನನ್ನ ಕುತೂಹಲ ಕೇಳಿತ್ತು.

"ಶಾಲಿನಿಬಾಯಿ ಹೇಳಿದರು ಇದೇ 25ನೇ ತಾರೀಖು ನಮ್ಮ ವೆಡಿಂಗ್ ಆನಿವರ್ಸರಿ–ಹೇಳಿದರೋ ಇಲ್ವೋ ? ಅಂತ ಕೇಳಿದರು"–

"ಷಹಬಾಸ್– ಗೋ ಆನ್"–

''ನಾನಂದ ನಿಮ್ಮ ಬರ್ತ್‌ಡೇ ಯಾಕಾಗಿರಬಾರ್ದು ? ಅಂತ, ಆದಕ್ಕ ಅವರು ಮುಖ ಕೆಂಪಗೆ ಮಾಡಿಕೊಂಡು ಅವರು ಹಾಗೇನಾದ್ರೂ ಹೇಳಿದ್ದರೆ ಅವರ ಮುಖ ಪುನಃ ನಾನು ನೋಡೊಲ್ಲ–ಅಂದ್ರು. ನಾನು ಯಾಕಮ್ಮ ? ಅಂತ ಕೇಳಿದೆ. ನನ್ನ ಬರ್ತ್‌ಡೇ ಆಗಸ್ಟ್ ನಾಲ್ಕು ಅಂದು ಬಿಟ್ರು"–

''ಭೇಷ್ ಆಮೇಲೆ'' ?

''ಅವರಿಗೆ ಇಪ್ಪತ್ತು ರೂಪಾಯಿ ಕೊಡ್ತಾ ಹೇಳಿದೆ- ನೀವು ಪೊದ್ಲು ಹೇಳಿದ್ದೇ ಸರಿ ನಿಮ್ಮ ವೆಡಿಂಗ್ ಆನಿವರ್ಸ್‌ರಿ ಅಂತ್ಲೇ ನಿಮ್ಮ ರೈಟಿಂಗ್ ಇನ್ನೂ ಬೆಳೀಲಿ ಅಂತ ವಿಷ್ ಮಾಡಿ ಕಳ್ಸಿದಾರ. ಬರ್ತಾರೆ ಸ್ವಲ್ಪ ವಾಷ್ ಡ್ರೆಸ್ ಮಾಡ್ಕೊಂಡು ಅಂದೆ"

''ದುಡ್ಡು ತಕೊಂಡ್ರೆ ?

''ಬೆಟ್ ಮಾಡಿ ಗೆದ್ದ ದುಡ್ಡನ್ನ ಯಾರು ಸರ್ ಬಿಡ್ತಾರೆ ಅದರಲ್ಲೂ ಲೇಡೀಸು" ?

''ಶ್ರೀಪತಿ.........

''ನಾನು ವಿಷಯ ಹೇಳಿದ ತಕ್ಷಣ ಒಂದು ಚಿಕ್ಕ ಕಾರ್ಡ್‌ನಲ್ಲಿ ಎರಡೂ ಡೇಟ್ಸ್‌ನ ಬರ್ಕೊಂಡು ಬಿಟ್ಟು ಆಟೋ ಮಾಡ್ಕೊಂಡು ಒಂಟಿ ಕೊಪ್ಪಲಿಗೆ ಹೊರಟು ಹೋದ್ರು–

ಛೇಪ್ ಶೌರಿ ಇಪ್ಪತ್ತು ರೂಪಾಯಿ ನಾಕೊಡ್ತೇನೆ ಶ್ರೀಪತೀನ ಕೇಳ್ಬೇಡ ...

''ಫಿಫ್ಟೀ ಪ್ಲಸ್ ಟ್ವೆಂಟೀ ಕೊಟ್ರು ಸರ್ ಅವರೇ''

''ಪ್ಲಸ್ ನಂದು ಟ್ವೆಂಟೀ ಸೇರಿಸ್ಕೋ ಶೌರಿ''

''ಥ್ಯಾಂಕ್ಸ್ ಸರ್ ಗೀಜರ್ ಆನ್ ಮಾಡಿದ್ದೇನೆ ಸರ್ ಅಂದ

ಕಾನೂನು

ಕಾನೂನು ಒಂದು ಕತ್ತೆ
ಮುಂದ ಬಂದರೆ ಕಡಿಯುತ್ತೆ
ಹಿಂದೆ ಹಾದರಂತೂ
ತಪ್ಪುಲ್ಲ ಲತ್ತೆ !
ಅರೆ ತಿಳುವಳಿಕೆಯುಳ್ಳವರಿಗೆ
ಇದು ಸದಾ ಕಿರಿ ಕಿರಿ ಕೊಡುವ ಅತ್ತೆ
ತಿಳಿಯದಿದ್ದರೆ ನೀನು
ಅದರ ಕೈಯೆಲ್ಲಿ ಸಿಕ್ಕು ಸತ್ತೆ !
ಯಾಕೆಂದರೆ
ಇದು ಪ್ರಜಾಸತ್ತೆ

ಮ. ಗು. ಬಿರಾದಾರ

ಟ್ರೈಟೊ, ಸ್ಲೀಪರ್‌ರೀ ದಪ್ಸೋನ್ಸಿಕೇ ಇತ್ಯಾದಿ

ಶಂಸ

‘ಕನ್ನಡಿಗರು ಮಲಗಿ ಗೊರಕೆ ಹೊಡೆಯುತ್ತಿದ್ದಾರೆ. ಅವರನ್ನು ಎಚ್ಚರಿಸುವವರಿಲ್ಲ’ ಎಂಬ ಸುಪ್ರಸಿದ್ಧ ಹೇಳಿಕೆಯನ್ನು ನಾನು ಸರ್ವಥಾ ಒಪ್ಪುವುದಿಲ್ಲ. ‘ಕನ್ನಡಿಗರನ್ನು ಎಚ್ಚರಿಸುವವರಿದ್ದಾರೆ. ಆದರೆ ಅವರು ಏಳಲು ಸರ್ವಥಾ ಸಿದ್ಧರಿಲ್ಲ’ ಎಂಬುದು ನನ್ನ ಖಚಿತ ಅಭಿಪ್ರಾಯ. ನಮ್ಮ ಬೀದಿಯ ಜನರ ನಿದರ್ಶನವನ್ನೇ ನೋಡಿ. ನಾವಿರುವುದು ನವಗ್ರಹ ಬಡಾವಣೆಯ ಸೂರ್ಯ ರಸ್ತೆಯಲ್ಲಿ. ಈ ರಸ್ತೆಯ ಇಕ್ಕಡೆಗಳಲ್ಲಿರುವ ಇಪ್ಪತ್ತೆಂಟು ಮನೆಗಳವರಗೂ ‘ಒಂದೇ ಕುಲ, ಒಂದೇ ಮತ. ಎಲ್ಲರೂ ಸೂರ್ಯವಂಶದವರು. ಭಾನುವಾರ ಮಾತ್ರ ರಂಗೋಲಿ (ಹಾಕುವ ಸಮಯಕಲ್ಲ. ಬರುವ) ವೇಳೆಗೆ ಕಣ್ಣು ತಿಕ್ಕಿಕೊಳ್ಳುತ್ತ ಎದ್ದು, ರಂಗೋಲಿ ಮುಕ್ತಾಯ ವಾದೊಡನೆ ಮತ್ತೆ ಮಲಗುವುದರಲ್ಲಿ ಏನು ಹೆಗ್ಗಳಿಕೆಯಿದೆ ? ನಮ್ಮ ಬೀದಿಯ ಜನರೆಲ್ಲ ಪ್ರತಿದಿನ ಬೆಳಿಗ್ಗೆ (?) ಏಳುವುದು ಒಂಭತ್ತು ಗಂಟೆಯ ಅನಂತರವೇ. (ಭಾನುವಾದರೆ ಆಫ್ಟರ್‌ನೂನಿಗೆ), ನೌಕರಿಗಾಗಿ ಕಛೇರಿ-ಕಾರ್ಖಾನೆಗಳಿಗೆ ಹೋಗುವ ಮಂದಿಕೂಡ 9ರಿಂದ 9½ವರೆಗಿನ ಅರ್ಧಗಂಟೆಯ ಅಲ್ಪಾವಧಿಯಲ್ಲಿ ಸ್ನಾನ ಕಾಫಿತಿಂಡಿ ಇತ್ಯಾದಿ ಸಿದ್ಧತೆ ಮುಗಿಸಬಲ್ಲ ಚುರುಚುರುಚುರುಕು ಜನರು.

ಹಾಗೆಂದು ನಮ್ಮನ್ನು ಎಚ್ಚರಿಸುವವರಿಲ್ಲವೇ ? ಛೇ, ಛೇ, ‘ಸುಪ್ರಭಾತ’ದ ರೆಕಾರ್ಡ್‌ಹಾಕಿ ಎಚ್ಚರಿಸಲು ನಾವೇನೂ ದೇವವರ್ಗಕ್ಕೆ ಸೇರಿದವರಲ್ಲ ನಾವು ಹುಲು ಮನುಜರು. ನಮ್ಮನ್ನು ಎಚ್ಚರಿಸಲು ಪ್ರಯತ್ನಿಸಿ ವಿಫಲರಾಗುವ ಜಾಗ್ರತಿದಳದವರು ಹಲವು ಮಂದಿ. ಇವರಲ್ಲಿ ‘ಆಲೂ’ ಎಂದು ಕಿರುಚುವ ಮತ್ತು ಟ್ರಿಣ್ಣೆನುತ್ತ ‘ಪಾರ್’ ಎಂದು ಕೂಗುವ ಹುಡುಗರನ್ನು ನಾವು ‘ನಿವಾರಿಸಿ’ ಕೊಂಡಿದ್ದೇವೆ. ನಮ ಸೂಚನೆಯಂತೆ ಅವರು ಸದ್ದು ಮಾಡದೆ, ಪೇಪರ್ ಮತ್ತು ಹಾಲಿನ ಪ್ಯಾಕೆಟ್‌ಗಳನ್ನು ವರಾಂಡದ ಕಿಟಿಕೆಯೊಳಗೆ ರಪ್ತು ಮಾಡಿ, ಆ ಕಿಟಕಿಗಾಗಿಯೇ ವಿಶೇಷವಾಗಿ ಸಜ್ಜು ಗೊಳಿಸಲಾದ ಹೊರಗಿನ ಅಗಳಿ ಹಾಕಿ ಹೊರಟು ಹೋಗುತ್ತಾರೆ. ಏಕೆಂದರೆ ಬೀದಿ ಯಲ್ಲಿ ಓಡಾಡುವ ಮಾರ್ಜಾಲ ಸಂತತಿ ಒಳನುಗ್ಗಿ ಹಾಲಿನ ಪ್ಯಾಕೆಟ್ ಒಡೆಯಬಾರ ದಲ್ಲ ! ಪೇಪರ್‌ಗಳನ್ನು ಸಿಟ್‌ಔಟ್‌ನಲ್ಲಿಯೇ ಎಸೆದು ಹೋದರೂ ಅದನ್ನು ನೆರೆ ಹೊರೆಯ ಮನೆಯವರು ಕದಿಯುವುದಿಲ್ಲ ಮತ್ತು ಕದಿಯಲಾರರು ಕೂಡ, ಏಕೆಂದರೆ

ಅವರೆಲ್ಲ ಏಳುವುದೂ ಒಂಬತ್ತು.ಗಂಟೆಯಮೇಲೆಯೇ. ಆದರೆ ಬೆಳಿಗ್ಗೆ ವಾಕಿಂಗ್ ನಪದಿಂದ ನಮ್ಮ ಬೀದಿಯಲ್ಲಿ ಓಡಾಡುವ ಇತರ ಬೀದಿಗಳ ದೈವಭಕ್ತ ಪುಷ್ಪ ಚೋರರು ಪೇಪರ್‌ಗಳನ್ನು ಕದ್ದೊಯ್ದಾರೆ ಎಂಬ ಅಂಜಿಕೆಯೇ ನಮ್ಮ ಈ ಮುನ್ನೆಚ್ಚರಿಕೆಗೆ ಕಾರಣ.

ಹಾಲಿನ ಹಾಗೂ ಪೇಪರ್ ಹುಡುಗರಿಗೇನೋ ಸೂಕ್ತ ತರಬೇತಿ ನೀಡಿ ಅವರನ್ನು ನಮ್ಮ ಅಸುಕೂಲಕ್ಕೆ ತಕ್ಕಂತೆ 'ಪಳಗಿಸಿ'ಕೊಂಡಿದ್ದೇವೆ, ಆದರೆ ಇನ್ನಿತರ ಕಟುಕರ ವಿಚಾರ ? ಮಧ್ಯಾಹ್ನದ ವೇಳೆಗೆ ರಾಗಬದ್ಧವಾದ ಕರ್ಕಶ-ಮಧುರ ಸ್ವರದಿಂದ ಕಿರುಚುವ ಎಳನೀರು -ಹಳೇಪೇಪರ್-ಖಾಲಿಶೀಸೆ-ಕೋಳಿಮರಿಗಳವರನ್ನು ಬಿಟ್ಟುಬಿಡೋಣ. (ನಮ್ಮದು ಬ್ರಾಹ್ಮಣರ ಬೀದಿಯೆಂದು ತಿಳಿದೂ, ಪ್ರತಿದಿನ ಬರುವ ಕೋಳಿಮರಿ ಮಾರಾಟಗಾರರ ಮೂರ್ಖತನಕ್ಕೆ (ಅಥವಾ ಒಳಗುಟ್ಟು ತಿಳಿದವರೋ!) ಮರುಕವುಂಟಾಗುತ್ತದೆ.) ಬೆಳಗ್ಗೆಯೇ ಬಂದು ಸುಖನಿದ್ರೆಗೆ ತೊಂದರೆ ಕೊಡುವ ಕ್ರೂರಿಗಳನ್ನು ಕ್ಷಮಿಸುವುದು ಹೇಗೆ ತಾನೇ ಸಾಧ್ಯ? ಇವರಿಗೆ ಯಾರ-ಅಳುಕೂ ಇಲ್ಲ, ನಮ್ಮ ಬೀದಿಯಲ್ಲಿ ಇವರನ್ನು ಆಹ್ವಾನಿಸಿ ವ್ಯಾಪಾರ ಮಾಡುವವರು ಯಾರೂ ಇಲ್ಲವೆಂದು ತಿಳಿದಿದ್ದರೂ, ಇವರು ಲಜ್ಜೆಯೇ ಇಲ್ಲದೆ, ಪ್ರತಿದಿನ ಬೆಳಗ್ಗೆ ಒಂದುಸಲ ಬಂದು ಕೂಗಿ ಅಶಾಂತಿ ಉಂಟುಮಾಡದೆ ಇರುವುದಿಲ್ಲ. ಇವರು ಏಳೆಂಟು ಅಕ್ಷರಗಳನ್ನೆಲ್ಲ ಒಂದೆಡೆ ರಾಶಿ ಹಾಕಿ, ಜಜ್ಜಿ, ಒಂದು ಮುದ್ದೆಮಾಡಿ, ಯಾವ ಭಾಷಾವಿಜ್ಞಾನಿಗಳಿಗೂ ಅರ್ಥವಾಗದ, ಆದರೆ ನಮ್ಮಂಥ ಶ್ರೀಸಾಮಾನ್ಯರಿಗೆ ಮಾತ್ರ ಅರ್ಥವಾಗುವ, ವಿಶಿಷ್ಟ ರೀತಿಯಲ್ಲಿ ಉಚ್ಚರಿಸುತ್ತಾರೆ. ಇವರು ಮಾಡುವ ಅಕ್ಷರಗಳ ಮಿತವ್ಯಯವನ್ನು ನಮ್ಮ ಬಹಳಷ್ಟು ಬರಹಗಾರರು ಕಲಿಯಬೇಕಾಗಿದೆ.

ಮೊನ್ನೆ ಎರಡನೆಯ ಶನಿವಾರ ಹೀಗಾಯಿತು-ನನಗೆ ಜ್ಞಾನಪೀಠ ಪ್ರಶಸ್ತಿ ಬಂದಿತ್ತು. ಬೆಳಗಿನ ಜಾವದ ಕನಸು ನನಸಾಗುತ್ತದಂತೆ. ಖುಷಿಯಲ್ಲಿ ಮಲಗಿದ್ದೆ 'ಗೋವಿಂದಾ ಗೋವಿಂದಾ' ಎಂದು ಕೂಗುತ್ತ ಗೇಟನ್ನು ಅಲ್ಲಾಡಿಸಿ ಸದ್ದುಮಾಡಿದ 'ಶ್ರಾವಣದ' ಹುಡುಗರನ್ನು ಬಯ್ದು ಕಳಿಸಿದೆ-ಮಲಗಿದ್ದಲ್ಲಿಯೇ, ಅವರನ್ನೇನೋ ಓಡಿಸಿದೆ ಆದರೆ ಮತ್ತೆ ಮಾಮೂಲಿ ಕಿರುಚುವಿಕೆಗಳು, ಒಂದರ ಹಿಂದೆ ಇನ್ನೊಂದರಂತೆ "ಲ್ಯೋರ್ಣವ್ 'ನ್ಯಾಂಬ್ರ್ಯೋ'; 'ಟ್ಮಟೋ ; ಪ್ಲೀರ್ಪರೀ ; 'ಟೀಕೋ; 'ಪ್ಪೋ; 'ಸ್ಗೀರ್ಪರೀ' 'ದಪ್ಪೇನ್ನಿಕೇ "ಬಾಲಣ್ಣೋ" ಇತ್ಯಾದಿ ಈ ಪಿರಿಪಿರಿಗಳನ್ನೆಲ್ಲ ಸಹಿಸಿಕೊಂಡು ಪುನಃ ನಿದ್ರಾದೇವಿಯನ್ನು ಅಪ್ಪಿಕೊಂಡೆ. ಹತ್ತು ಹದಿನೈದು ವರ್ಷಗಳಿಂದ ಇವರ ಈ ಹಾವಳಿ ಅಭ್ಯಾಸವಾಗಿರುವುದರಿಂದ, ಈ ತೊಂದರೆಗಳನ್ನೆಲ್ಲ ಸ್ವಪ್ನ

ಲೋಕಕ್ಕೆ ತಳ್ಳುವ ರೂಢಿಯಾಗಿ ಹೋಗಿತ್ತು ನನಗೆ. ಆದರೆ ಹತ್ತು ಗಂಟೆಯವೇಳೆಗೆ ಪೋಸ್ಟ್ ಮ್ಯಾನ್ ಬಂದು ಕೂಗಿದಾಗಮಾತ್ರ ನನಗೆ ವಿಪರೀತ ಕೋಪಬಂತು. ಲೆಟರ್ ಬಾಕ್ಸ್‌ಗೆ ಹಾಕಿ ತೊಲಗಬಾರದೇ ಎಂದು ಕೊಳ್ಳುತ್ತಿರುವಾಗ ಮತ್ತೆ ಕಿರುಚಿದ. 'ರಿಜಿಸ್ಟರ್ಡ್ ಪೋಸ್ಟ್' ಎಂದು. ಆದರೂ ನಾನು ಮಾತನಾಡಲಿಲ್ಲ. ಆರೇಳು ದಿನಗಳ ವರೆಗೆ ಅವನು ಅದನ್ನೇನೂ ವಾಪಸ್ ಕಳಿಸುವಂತಿಲ್ಲವಲ್ಲ ? ಅವನು ಮತ್ತೆ ಮತ್ತೆ ಕೂಗಿ ಸುಸ್ತಾಗಿ ಹೊರಟು ಹೋದ. ನಾನು ಅಸಹನೆಯಿಂದ 'ಇನ್ನೆಲ್ಲಿಯ ನಿದ್ದೆ' ? ಎಂದು ಗೊಣಗಿಕೊಂಡು, ಹಾಗೆಯೇ ಮುಸುಕು ಎಳೆದುಕೊಂಡು ಮತ್ತೆ ಮಲಗಿಬಿಟ್ಟೆ.

ಶಬ್ದಕೋಶ

ಲ್ಯೋ೯ಾವ್ = ಮಲ್ಲಿಗೆ ಹೂ
ನ್ಯಾಂಬ್ರ್ಯ – ಕನಕಾಂಬರ ಹೂ
ಟ್ಮೆಟೋ – ಟೊಮೆಟೊ
ಪ್ಲೇರ್ಪರೀ = ಚಪ್ಪಲಿರಿಪೇರಿ
ಟೀಕೊ = ಪೆಟ್ಟಿಕೋಟ್
ಪೋ = ಸೊಪ್ಪು
ಸ್ಗೇರ್ಪರೀ = ಹಾಸಿಗೆ ರಿಪೇರಿ
ದಪ್ಪೇನ್ಸಿಕೆ – ದಪ್ಪಮೆಣಸಿನಕಾಯಿ
ಬಾಲಣ್ಣೊ – ಬೇಲದ ಹಣ್ಣು

ಕಾವೇರಿ

ಕಾವೇರಿ
I Love You
ಎಂದಾಗ
I Hate You
ಎಂದಳು
ಕಾವೇ
–ರಿ.

ಮುಂಡಗೆರೆ ನಾಗೇಶ್

ಬೆಳಗಾಗಿ ನಾನೆದ್ದು.........

ಎಚ್. ಗೋಪಾಲಕೃಷ್ಣ

ಅಂದ ಕಾಲತ್ತಿಲ್ಲೈ ಅಂದರೆ ನಾನು ಕೆಲಸಕೆ ಸೇರುವ ಮೊದಲು ಮತ್ತು ವಿದ್ಯಾಭ್ಯಾಸ ಮುಗಿಸಿದ ನಡುವಿನ ಪೀರಿಯಡ್‌ನಲ್ಲಿ. ಇನ್ನೂ ಅಂದರೆ ತ್ರಿಶಂಕು ಸ್ಥಾನದಲ್ಲಿರುವಾಗ ಕೆಲವು ಜನರನ್ನು ನೋಡಿದರೆ ಅತಿ ಸಂತೋಷವಾಗುತ್ತಿತ್ತು. ಈ ಕೆಲವು ವಿಶೇಷಗುಂಪಿನಲ್ಲಿ ನನಗೆ ಅಪ್ಯಾಯಮಾನವಾಗಿದ್ದವರು ಪೋಲೀಸರು, ಟೆಲಿಗ್ರಾಂ ಹಂಚುವ ಆಪರೇಟರುಗಳು, ರಾತ್ರಿರಿಕ್ಷಾ ಚಾಲಕರು, ಹಾಲಿನವಾನುಗಳು ಮತ್ತು ಅವರ ಡ್ರೈವರುಗಳು, ಪೇಪರು ಹಾಕುವ ಹುಡುಗರು ಮತ್ತು ಮರೆತ ಹಲವಾರು ವೃತ್ತಿನಿರತರು. ಹೌದು, ಮರೆತಿದ್ದೆ ಬೆಳಿಗ್ಗೆ ಐದು ಘಂಟೆಗೇ ರಸ್ತೆಯಲ್ಲಿ ನಿಕ್ಕರಿನಲ್ಲಿ ಶೂ ಸಾಕ್ಸುಗಳನ್ನು, ಹಿಡಿದು ಬಸ್ಸು ಹಿಡಿಯಲು ಓಡುವ ಫಸ್ಟ್‌ಷಿಫ್ಟಿನ ಕಾರ್ಮಿಕರು,

ಸುಮಾರು ವರ್ಷಗಳು ಮೇಲೆ ಈ ಗುಂಪಿನ ಜನರನ್ನೇ ನಾವೇಕೆ ಪಸಂದಿಸುತ್ತಿದ್ದೆ ಎಂದು ನಾನೇ ಕುಳಿತು ಚಿಂತಿಸುತ್ತಿದ್ದರೂ ನನ್ನ ಚಿಂತೆಗೆ ಪರಿಹಾರ ದೊರೆತಿರಲಿಲ್ಲ. ಕಳೆದ ವರ್ಷ ಪಟ್ಟುಬಿಡದೆ ಪಂಚಾಯತ್‌ರಾಜ್ ಮಂತ್ರಿಯ ಹಾಗೆ ಕೂತು ಕಾರಣ ಹುಡುಕಿದೆ. ಎರಡು ವಾರದ ದೀರ್ಘಚಿಂತನೆಯಿಂದ ಈ ವೃತ್ತಿನಿರತರನ್ನು ನಾನೇಕೆ ಇಷ್ಟಪಡುತ್ತೇನೆ. ಎಂಬ ಪ್ರಶ್ನೆಗೆ ಕಾರಣ ಹುಡುಕಿಯೇಬಿಟ್ಟೆ!

ಕಾರಣ ಏನೂಂತೀರ ? ಈ ವೃತ್ತಿನಿರತ ಜನರೆಲ್ಲರೂ ತಮ್ಮ ಬೆಳಗಿನ ಸವಿನಿದ್ದೆಗಳನ್ನು ಕೆಡಿಸಿಕೊಳ್ಳುವ ಜನ! ಬೆಳಗಿನ ಸವಿನಿದ್ದೆ ಕೆಡಿಸಿಕೊಳ್ಳುವ ಯಾರನ್ನೇ ಕಂಡರೂ ನನಗೊಂದು ರೀತಿ ಅನುಕಂಪ. ಈ ಅನುಕಂಪ ಸಂತೋಷವಾಗಿ ಪರಿವರ್ತಿತವಾಗುತ್ತಿತ್ತು. ಈ ಸತ್ಯ ನನಗೆ ಹೊಳೆಯುವ ಹೊತ್ತಿಗೆ ನಾನೂ ಸಹ ಮೇಲಿನ ಗುಂಪಿನಲ್ಲಿ ಒಬ್ಬನಾಗಿ ಹೋಗಿದ್ದೆ. ಅಂದರೆ ಫ್ಯಾಕ್ಟರಿಯಲ್ಲಿ ಕೂಲಿ ಕೆಲಸಕ್ಕೆ ಸೇರಿ ಬೆಳಗಿನಜಾವ ನಾಲ್ಕಕ್ಕೆ ಎದ್ದು ನಾಲ್ಕೂ ಇಪ್ಪತ್ತೆರಡಕ್ಕೆ ಕೈಲಿ ಷರ್ಟುಪ್ಯಾಂಟು ಶೂ ಸಾಕ್ಸು ಹಿಡಿದು ಬಸ್ಸು ಇನ್ನೂ ಬರದೇ ಇರಲಿ, ಎಂದು ದೇವರನ್ನು ನೆನೆಯುತ್ತ ಫಾಕ್ಟರಿಬಸ್ಸು ಹಿಡಿಯಲು ಓಡುತ್ತಿದ್ದೆ ! ಜನವೆಲ್ಲ ಮಲಗಿರಲು ಅದ್ಯಾವನೋ ಒಬ್ಬ ಎದ್ದು ಮುಕ್ತಿಯ ಕಡೆಗೆ ಹೆಜ್ಜೆ ಹಾಕಿದ ಎಂದು ನಮ್ಮ ಮಹಾಕವಿಗಳು ವರ್ಣಿಸಿದ್ದಾರಂತೆ ನಾವೂಸಹ ಜಗವೆಲ್ಲ ಮಲಗಿರಲು ಎದ್ದು ಹೊರಡುವೆವು ಕೆಲಸಕ್ಕೆ ಎಂದು ಕೆಲವು ಬಾರಿ ಸಮಾಧಾನ ಮಾಡಿಕೊಂಡರೂ ಬೆಳಗಿನ ಜಾವದ ಸುಖಕನಸಿನಲ್ಲಿ ಮ

ಮರೆತು ಮಲಗಿರುತ್ತಿದ್ದ ಇಡೀ ಲೇಔಟ್ ಜನರನ್ನು ನೆನೆದೇ ಹೊಟ್ಟೆ ಉರಿಯುತ್ತಿತ್ತು, ಸಂಕಟವಾಗುತ್ತಿತ್ತು ಮತ್ತು ಬೆಳಗಿನ ಸುಖನಿದ್ರೆ ಮಾಡುವವರನ್ನು ಕಂಪಲ್ಸರಿ ಯಾಗಿ ಯಾವುದಾದರೂ ಫ್ಯಾಕ್ಟರಿಗೆ ಸೇರಿಸಬೇಕು ಎಂದೂ ಅನಿಸುತ್ತಿತ್ತು

ಬೆಳಗಿನ ಸುಖನಿದ್ರಿಗರಿಗೆ ಕಿರಿ ಕಿರಿ ಮಾಡಬೇಕೆಂದು ಕಿತಾಪತಿ ಐಡಿಯಾಗಳು ಬಹುಶಃ ನಮ್ಮ ತಲೆಗೆ ಇದೇ ಸಮಯದಲ್ಲಿ ಹೊಳೆಯಿತು ಎಂದು ತೋರುತ್ತೆ. ಇದಕ್ಕಾಗಿ ನಾನು ಹಲವಾರು ನಾವೆಲ್ ಐಡಿಯಾಗಳನ್ನು ಹುಡುಕಿದೆ. ಅದರಲ್ಲಿ ಕೆಲವನ್ನು ಜಾರಿಗೂ ತಂದೆ. ಯಾವುದೇ ಸಮಯದಲ್ಲಿ ರೇಡಿಯೋ ಹಾಕಿ ಸ್ಟೇಷನ್ ಗಳನ್ನು ತಿರುಗಿಸಿದರೂ ಜಗತ್ತಿನ ಯಾವುದಾದರೂ ಒಂದು ಮೂಲೆಯಲ್ಲಿ ತಮಿಳು ಹಾಡುಗಳು ಬರುತ್ತವೆ ಎಂಬ ಸತ್ಯವನ್ನು ಅದ್ಯಾವಾಗಲೇ ಕಂಡು ಹಿಡಿದಿದ್ದೆ. ಮೊದಲ ಪ್ರಯೋಗ ನಡೆದದ್ದು ಹೀಗೆ. ನಾಲ್ಕಕ್ಕೆ ಎದ್ದವನೇ ರೇಡಿಯೋ ಕಿವಿ ಹಿಂಡಿ ತಮಿಳು ಸಿನಿಮಾ ಹಾಡುಗಳ ಸ್ಟೇಷನ್ ಹುಡುಕುವುದು ಮತ್ತು ನಾಲ್ಕು ಬೀದಿಗಳೂ ಕಿತ್ತುಹೋಗುವಷ್ಟು ಗಟ್ಟಿಯಾಗಿ ರೇಡಿಯೋ ಹಾಕುವುದು. ಮೊದ ಮೊದಲು ನಮ್ಮ ಮನೆಯಿಂದಲೇ ಈ ಪ್ರಯೋಗಕ್ಕೆ ತಡೆ ಬಂದಿತು. ಬೆಳಿಗ್ಗೆದ್ದು ಹಾಳು ಸಿನಿಮಾಹಾಡು ಯಾರಿಗೆಬೇಕು ಎಂದು ನನ್ನ ಬೆಟರ್‌ಹಾಫು ಕೊಂಕೆಸೆದಳು. ಸರಿ, ಭೀಮಸೇನಜೋಷಿಯವರ ದಾಸರ ಪದಗಳ ರಿಕಾರ್ಡ ಕ್ಯಾಸೆಟುಗಳನ್ನು ತಂದು ಹಾಕಲಾರಂಭಿಸಿದೆ.

ಮೊದಲೊಂದೆರಡುವಾರ ಸುತ್ತಮುತ್ತಲಿನವರು ನಿದ್ರೆಯಿಂದ ಎಚ್ಚೆತ್ತು ಬಾಗಿಲು ತೆರೆದು ನಮ್ಮ ಮನೆಯ ಕಡೆ ದುರ ದುರ ನೋಡುವುದನ್ನು ಬಾಗಿಲ ಸಂದಿಯಿಂದ ಗಮನಿಸಿದೆ. ಮೂರನೇವಾರ ಈ ಶಬ್ದಕ್ಕೆ ಜನ ಅಡ್ಜಸ್ಟ್ ಆದರು ಎನಿಸಿಬಿಟ್ಟಿತು. ನಾಲ್ಕನೇವಾರ ನನ್ನಾಕೆಯನ್ನ ನೆರೆಮನೆಯವರು ಕೇಳಿದರಂತೆ ಏಕೆ ಇವತು ಬೆಳ್ಳಗೆ ನಿಮ್ಮೆಜಮಾನ್ರು ದಾಸರಪದ ಹಾಕಲಿಲ್ಲ? ಅವತ್ತು ಬೆಳಿಗ್ಗೆನೇ ದಾಸರಪದ ಹಾಕಿದ್ದೆ ! ಆದರ ಶಬ್ದಕ್ಕೆ ಅಂದರೆ ದಾಸರ ಪದದ ಮಾಧುರ್ಯಕ್ಕೆ ಈ ಸುತ್ತಮುತ್ತಲಿನವರು ಅಡ್ಜಸ್ಟ್ ಆಗಿಬಿಟ್ಟರು ಎಂಬ ಕೆಟ್ಟ ಸತ್ಯ ಆಂದೇ ಗೊತ್ತಾಗಿ ಬಿಟ್ಟಿತು. !

ಎರಡನೇ ಪ್ರಯೋಗ ಅಂದರ ಬೆಳಗ್ಗೆ ಎದ್ದ ಕೂಡಲೇ ಗಡಿಯಾರದ ಆಲಾರಂಗಳನ್ನೂ ಹತ್ತು ಹದಿನೈದು ನಿಮಿಷ ಬಿಡದೇ ಬಾರಿಸೋದು. ಇಂತಹ ಗಡಿಯಾರದ ಅಲಾರಂ ಪ್ರಯೋಗ ಎರಡುವಾರ ನಡೆದ ನಂತರದ ಒಂದು ರಾತ್ರಿ ಗಡಿಯಾರ ಹುಡುಕಿದೆ. ಸಿಕ್ಕಲಿಲ್ಲ.

"ಗಡಿಯಾರ–ಅಲಾರಂ ಗಡಿಯಾರ ಏನಾಯಿತು ?" ಅಂತ ಮನೆಯವರ ಮೇಲೆ ರೇಗಿದೆ.

ಆರನೇ ರಸ್ತೆ ಮೂರನೇ ಮನೆ ಸತ್ಯಭಾಮಾ ಇದಾರನೋಡಿ ಅಂತ ನನ್ನಾಕೆ ನನ್ನೆಡೆಗೆ ನೋಡಿದಳು.

'ಹೂಂ ಅದ್ಯಾರು ಕೃಷ್ಣ ಸತ್ಯಭಾಮಾ?" ಅಂತ ಮತ್ತೆರೇಗಿದೆ.

"ಕೃಷ್ಣಸತ್ಯಭಾಮ ಅಲ್ಲಾರೀ, ಆಕೆ ಯಜಮಾನರ ಹೆಸರು ಶೇಂಗೊಟ್ಟಿವೇಲು ಅಂತ. ನಿಮ್ಮ ಫ್ಯಾಕ್ಟರೀಲೇ ಇದಾರಲ್ಲಾ ?"

'ಗಡಿಯಾರ ಏನಾಯಿತು ಅಂತ ಕೇಳಿದ್ದು.' ಅಂತ ಮತ್ತೆ ರೇಗಿದೆ.

'ಅದ್ಯಾಕೆ ಹಾಗೆ ರೇಗ್ತೀರೀ ? ಗಡಿಯಾರ ವಿಷಯಕ್ಕೆ ಬಂದೆ ಸತ್ಯಭಾಮನ ತಂಗಿಗೆ ಫೈನಲ್‌ಇಯರ್ ಪರೀಕ್ಷೆಯಂತೆ, ಅವರಿಗೆ ಎಲ್ಲಿ ಹುಡುಕಿದರೂ ಸರಿಯಾದ ಅಲಾರಂ ಗಡಿಯಾರ ಸಿಗಲಿಲ್ಲವಂತೆ, ನಿಮ್ಮನೆ ಗಡಿಯಾರದ ಸೌಂಡು ಬಹಳ ಚೆನ್ನಾಗಿದೆ. ಕೊಟ್ಟಿರ್ತೀರಾ ? ನನ್ನ ತಂಗಿ ಪರೀಕ್ಷೆಗೆ ಓದಿಕ್ಕೊಳ್ಳಬೇಕು, ಅವಳಿಗೆ ಎಚ್ಚರ ಮಾಡಿ ಸೋಕ್ಕೆ ಇದು ಅಗತ್ಯ ಅಂತ ಕೇಳಿದರು.'

ಹೂಂ ?

'ಕೊಟ್ಟುಬಿಟ್ಟೆ' ಅಂದಳು

'ವಾಪಸ್‌ಯಾವಾಗ ತರ್ತೀಯಾ ? ಅಂತ ಕೇಳಿದೆ.

ವಾಪಸ್ಸೇ! ಪಾಪ ಕಳೆದ ತಿಂಗಳು ಅವರು ಅವರ ಊರಿಂದ ನನಗೇಂತ ದೋಸೆ ತವ ತಂದು ಕೊಟ್ಟರು. ಕಾಸು ಇಸ್ಕೊಳ್ಳಿಲ್ಲ ಬೇಡ ಅಂದುಬಿಟ್ಟರು. ಅದಕ್ಕೇ ಈ ಗಡಿಯಾರ ಅವರಿಗೆ ಹಾಗೇ ಕೊಟ್ಟೆ ಅಂದಳು !

ಮತ್ತೆ ಈಗ ನಾನೇನು ಮಾಡಲೀ ? 'ಅಂತ ರೇಗಿದೆ.

ಶೇಂಗೊಟ್ಟಿವೇಲು ಮೊನ್ನೆ ಜಪಾನ್‌ಗೆ ಹೋಗಿದ್ದರಲ್ಲಾ? ಅಲ್ಲಿಂದ ಬರ್‍ತಾ ಯಾವುದೋ ಕುಂಯ್ ಕುಂಯ್ ಲಿನ್ಸೋ ರಿಸ್ಟ್‌ವಾಚು ತಂದಿರಾರೆ. ಬರೀ ಆರ್ನೂರು ಚೆಲ್ಲರೆ ಅಂತ. ಅದನ್ನ ಕೊಂಡುಕೊಂಡು ಬಂದಿದೀನಿ, ತೋರಿಸ್ತೀನಿ ಇರಿ...ಅಂತ ರೂಮಿನೊಳಗೆ ಹೋದಳು !

ಸುತ್ತ ಮುತ್ತಲಿನವರ ನಿದ್ದೆ ಕೆಡಿಸುವ ಅಲಾರಂ ಗಡಿಯಾರ ಕೈ ತಪ್ಪಿದಕ್ಕೆ ಆದ ಸಂಕಟ ಅಪಾರ. ಬೇರೆ ಕೇಮೆ ಇಲ್ಲದೆ ಒಂದುವಾರವಾರ ತೆಪ್ಪಗಿದ್ದೆ. ಮಧ್ಯಾಹ್ನದ ಟೀ ವಿ ನಲ್ಲಿ ಒಂದುದಿನ ದೇವರ ಮುಂದೆ ಜಾಗಟೆ ಬಾರಿಸುವ ದೃಶ್ಯ ಒಂದು ನೋಡಿದೆ. ನೆಕ್ಸ್ಟ್ ನಮ್ಮನೆಗೆ ಬಂದಿದ್ದು ಒಂದು ಜಾಗಟೆ ಮತ್ತು ಕೋಲು ಇದರ ಪ್ರಯೋಗ ಒಂದುವಾರ ಆಗುವಷ್ಟರಲ್ಲಿ ಸುತ್ತಮುತ್ತಲಿನ ಹದಿನಾರು ಮನೆಯವರು ಪಾಪ ಸಭ್ಯಸ್ತರು ಮನೆಗೆ ನನ್ನ ಮನೆಗೆ–ದಿವಸಕ್ಕೆ ಎರಡು ಪೋಸ್ಟ್‌ಕಾರ್ಡ್ ಹಾಕಿದರು.

ದೇವರ ಮೇಲೆ ನಿಮಗೆ ಭಕ್ತಿ ಇಷ್ಟು ಹರೀತಿರೋದು ನಮಗೆ ನಿಜವಾಗಲೂ ಸಂತೋಷ ತಂದಿದೆ. ದಯುಪಟ್ಟು ಸಂಜೆ ಆರು ಘಂಟೆಗೆ ಪೂಜೆ ಮಾಡಿದರೆ ನಾವೂ ಪ್ರತಿದಿವಸ ಒಂದು ಮಂಗಳಾರತಿ ಪ್ರಸಾದ ಸ್ವೀಕರಿಸುವ ಅನುಕೂಲ ಆಗುತ್ತೆ...... ಈ ಒಕ್ಕಣೆಯುದು ! ಮೂರನೇವಾರ ಈ ಜಾಗಟೆ ಕೋಲುಸಹ ಮಂಗಮಾಯ್ವ ಆಗಿತ್ತು. ಈ ಬಾರಿ ಹೆಂಡತಿ ನೀಡಿದ ಕಾರಣ–ಹೊಸದಾಗಿ ದೇವಸ್ಥಾನ ಕಟ್ಟಿದಾರಲ್ಲಾ ಅವರು ಚಂದಾ ವಸೂಲಿಗೆ ಅಂತ ಬಂದರು. ದುಡ್ಡೇ ಅಂತ ಅಲ್ಲಮ್ಮಾ ದೇವಸ್ಥಾನಕ್ಕೆ ಉಪಯೋಗ ಆಗುವ ಯಾವ ವಸ್ತು ಕೊಟ್ಟರೂ ತಗೋತೀವಿ ಅಂದರು. ಅವರಿಗೆ ಜಾಗಟೆ ಕೊಟ್ಟುಬಿಟ್ಟೆ" !

ಪರರ ನಿದ್ದೆ ಕೆಡಿಸುವ ನನ್ನ ಪ್ರಯತ್ನಗಳು ಹೀಗೆ ಒಂದಾದ ನಂತರ ಒಂದು ಸೋಲು ಕಾಣುತ್ತಿದ್ದರೂ ನಾನು ಧೃತಿಗೆಡಲಿಲ್ಲ ! ಆಗಾಗ ಹೊಸ ಹೊಸ ಐಡಿಯಾಗಳನ್ನು ಹುಡುಕುತ್ತಲೇ ಇದ್ದೆ.

ಈ ಹೊಸಾ ಐಡಿಯಾಗಳ ಪ್ರಕಾರ ಒಂದು ಸೈಲೆನ್ಸರ್ ಕಿತ್ತು ಹಾಕಿದ ಸ್ಕೂಟರ್ ಸಹ ತಂದಿದ್ದೆ. ಆದರೆ ಎರಡನೇ ರಸ್ತೆಯ ಎಂಟನೇ ಮನೆಯ ಸ್ಕೂಟರ್ ಗ್ಯಾರೇಜು ಮಾಲೀಕ ಒಂದೇ ದಿನದಲ್ಲಿ ಮುಫತ್ತಾಗಿ ಸೈಲೆನ್ಸರು ಹಾಕಿಸಿಕೊಟ್ಟುಬಿಟ್ಟಿದ್ದ, ಸೈಲೆನ್ಸರ್ ಸರಿ ಹೋದ ನಂತರ ನನಗೆ ಹೊಸದು ಐಡಿಯಾ ಅಂದರೆ ಬೆಳಿಗ್ಗೆ ಎದ್ದು ನಾಗಸ್ವರ ಕಲಿಯುವುದು. ಅದು ಹೇಗೋ ಒಬ್ಬರು ನಾದಸ್ವರ ಊದುವವರ ಪರಿಚಯ ಬೆಳೆಸಿದೆ. ನಾಗಸ್ವರ ಕಲಿಯಬೇಕು ಎಂಬ ಆಶಯ ತೋರಿಸಿ ಅವರಿಂದ ಬಹಳ ಕಷ್ಟಪಟ್ಟು ನಾಗಸ್ವರ ವಾದ್ಯ ಕೊಂಡು ತಂದೆ. ಮೂರನೆವಾರದಿಂದ ಪಾಠಕ್ಕೆ ಬರುವದಾಗಿ ಹೇಳಿ ಅಡ್ವಾನ್ಸ್ ಟ್ಯೂಷನ್ ಫೀ ಸಹ ತೆತ್ತೆ. ಮೂರು ದಿವಸ ಮನೆಯ ಮಹಡಿಮೇಲೆ ಬೆಳ್ಳಿಗ್ಗೆ ನಾಲ್ಕಕ್ಕೆ ಕೂತು ನಾಗಸ್ವರ 'ಅಭ್ಯಾಸ'

ನಡೆಸಿದೆ. ಐದನೇ ದಿವಸ ನಾಗಸ್ವರ ಕಾಣಿಸಲಿಲ್ಲ. ಫ್ಯಾಕ್ಟರಿಯಿಂದ ಬಂದು ನೆನಪಿನಿಂದ ಹೆಂಡತೀಯನ್ನು ನಾಗಸ್ವರ ಎಲ್ಲಿ? ಅಂತ ರೇಗಿ ಕೇಳಿದೆ. ಹೆಂಡತಿ ಕಿಸಕ್ ಅಂತ ನಕ್ಕಳು.

ನೀವು ಆದ್ಯಾರ ಹತ್ತಿರವೋ ತಂದಿದ್ದರಲ್ಲಾ? ಅದು ಅವರ ಸ್ವಂತದ್ದಲ್ಲವಂತೆ ಯಾವದೋ ನಿಮಗೆ ಕೊಟ್ಟುಬಿಟ್ಟಿದ್ದರಂತೆ. ನೀವು ಕೆಲಸಕ್ಕೆ ಅಂತ ಹೋದ ಕೂಡಲೇ ಪಾಪ ಆತ ಬಂದು ಕೇಳಿದ. ಯಜಮಾನರೇ ಬರಲಿ ಅಂತ ಎಷ್ಟು ಹೇಳಿದರೂ ಗೋಗರೆದ. ಅದರ ಜೋತೆಗೆ ಸುತ್ತ ಮುತ್ತ ಇರುವರೂ ಪಾಪ ಕೊಟ್ಟುಬಿಡಿ ಬಡವನ ಹೊಟ್ಟೆ ಮೇಲೆ ಹೊಡೀ ಬಾರದು ಅಂದರು. ಕೊಟ್ಟುಬಿಟ್ಟೆ......ಅಂತ ಮತ್ತೆ ನಕ್ಕಳು.

ನಿದ್ರೆ ಕೆಡಿಸುವ ಪ್ರತಿ ಪ್ರಯತ್ನಗಳೂ ಹೀಗೆ ಸೋಲುತ್ತಾ ಬಂದ ಹಾಗೆ ನಿದ್ದೆಗೆಡುವುದಕ್ಕೆ ಹಿಂದಿನ ಜನ್ಮದಲ್ಲಿ ಅದೇನು ಪಾಪ ಮಾಡಿದ್ದೇನೋ ಎಂಬ ವೇದಾಂತಕ್ಕೆ ನೇತು ಬಿದ್ದಿದೇನೆ. ಬೆಳಗಿನ ಜಾವ ನಿದ್ದೆ ಕೆಡದಿರುವ ಜನರೂ ಸಹ ಅದ್ಯಾವುದೋ ಪಾಪ ಮಾಡಿಯೇ ನಿದ್ದೆ ಮಾಡುತ್ತಿರಬಹುದು? ಅಂತಹ ಪಾಪ ಯಾವುದು ಅಂತ ತಿಳಿದರೆ ನಾನೂ ಸಹ ಈ ಜನ್ಮದಲ್ಲಿ ಅಂತಹ ಸಾವಿರ 'ಪಾಪ' ಮಾಡಿ ಮುಂದಿನ ಜನ್ಮದಲ್ಲಾದರೂ ಬೆಳಗಿನ ಸುಖನಿದ್ರೆ ತಪ್ಪಿಸಿ ಕೊಳ್ಳದಿರುವ ತೇಪೇದಾರಿಕೆ ಅಪ್ಪಿಕೊಳ್ಳಲು ತಯಾರು! ಬೆಳಗಾಗಿ ನಾನೆದ್ದು ಯಾರ್‍ಯಾರ ನಿದ್ದೆ ಕೆಡಿಸಲಿ? ಎಂಬ ದುರ್ಬುದ್ಧಿ, ದುರಾಲೋಚನೆಯಿಂದ ಮುಕ್ತಿ ಸಿಗಲಿ! ಜಗತ್ತಿನ ಜನರೆಲ್ಲರೂ ಬೆಳಗಿನ ಜಾವ ಸುಖವಾಗಿ ನಿದ್ರಿಸಲಿ ಮತ್ತು ಬೆಳಗಿನ ನಿದ್ದೆ ಕೆಡಿಸುವಂತಹ ಕೆಲಸ ಕಾರ್ಯಗಳನ್ನು ಕೈಡು ಹಿಡಿದವರು ಕೋಟಿ ಕೋಟಿ ಚೂರುಗಳಾಗಿ ಹೋಗಲಿ.

ಮಗ ಕೇಳಿದ್ದು :

"ಮೆಡಿಕಲ್ ಸೀಟ್‌ಗೆ '83ರಲ್ಲಿ CET ಕಟಾಫ್ ಶೇಕಡ 85 ಇದ್ದು '93ರಲ್ಲಿ ಶೇಕಡಾ 95 ಇದ್ರೆ 2003ರಲ್ಲಿ ಶೇಕಡ 105 ಇರುತ್ತೇನಪ್ಪ?"

“ಮಾತು ಮಾತು ಪ್ರಸಂಗೇಣ......!”

ಶ್ರೀಮತಿ ಅರುಣಾ ಆರ್. ಕಾರಂತ

ಕಾಳಪ್ಪಯ್ಯ ಕುಂದಾಪುರದ ಭಾರಿ ಸಾಹುಕಾರರು. ಊರಲ್ಲಿ ಒಡೆಯರ ಮನೆ ಎಂದರೆ ಅವರದ್ದೆ. ಉಳಿದವರೆಲ್ಲರೂ ಅವರವರ ಹೆಸರಿನ ಮುಂದೆ ಒಡೆಯರಂತ ಸೇರಿಸ್ಕೊಬೇಕಷ್ಟೆ. ಕಾಳಪ್ಪಯ್ಯ ಒಡೆಯರ ರೂಪು, ವ್ಯಕ್ತಿತ್ವವೂ ಕಣ್ಣಿಗೆ ಕಟ್ಟುವಂತಹದೇ ಆಗಿತ್ತಂತೆ. ದುಂಡು ಮುಖ, ತೀಡಿದ, ಕಣ್ಣು ಮೂಗು, ಗಲ್ಲ, ಗಲ್ಲದ ಮೇಲೆ ಸುರುಳಿಯಾಗಿ ನಿಲ್ಲುವ ಮುಖಕ್ಕೊಪ್ಪುವ ಮೀಸೆ ಮುಖಕ್ಕೆ ತಕ್ಕ ರೇಶ್ಮೆ ಪೇಟ, ಕೋಟು, ಕಚ್ಚೆಪಂಚೆ, ಅದಕ್ಕೊಪ್ಪುವ ಚಪ್ಪಲಿ ಕೈಯಲ್ಲಿ ಹಳೆಯ ಕುಸುರಿ ಕೆತ್ತನೆಯ ವಾಕಿಂಗ್ ಸ್ಟಿಕ್ ಹಿಡಿದು ನಿಂತರೆ ಎಂತಹವರೂ ವಂದಿಸಿ ತಲೆ ಬಾಗಿಸಿ ಹೋಗುತ್ತಿದ್ದರು. ಅವರ್ದು ಮನೆ ದೊಡ್ಡಕೋಟೆ ಅರಮನೆ ಇದ್ದಾಗೆ! ಸುಮಾರು ಒಂದು ಎಕರೆ ಜಾಗದಲ್ಲಿ ಹರಡಿದೆ. ಮನೆಯ ಮುಂದೆ ಆನೆ ಹೋಗಬಹುದಾದ ದೊಡ್ಡ ಹೆಬ್ಬಾಗಿಲು ಚಾವಡಿ–ಮಧ್ಯ ಅಂಗಳ, ನಂತರ ಭಾರಿ ಗಾತ್ರದ ಕುಸುರಿ ಕೆತ್ತನೆಯ ಕಂಭಗಳ ಸಾಲಿನ ಮನೆಯ ಚಾವಡಿ, ಅಲ್ಲಿಂದ ಪ್ರಧಾನ ಬಾಗಿಲು, ಚೌಕಿ ಒಳ ಹೋದಂತೆ ಸಿಂಹದ ಗುಹೆ ಹೊಕ್ಕಂತ ಅನುಭವ, ಕತ್ತಲೆ, ಮುಂದಬೆಳಕು ಪಕ್ಕದಲ್ಲಿ ಖಜಾನೆ ಈಗಿನ ಕತ್ತಲೆ ಕೋಣೆ ದೇವರ ಮನೆ ಓಂಕ. ಅಡಿಗೆಮನೆ, ಭೋಜನ ಶಾಲೆ-ಮತ್ತೆ ಜಾವಡಿ ದೊಡ್ಡ ಅಂಗಳ. ಮನೆ, ಅದಕ್ಕೆ ತಾಗಿ ಸಿಹಿನೀರಿನ ಒಳ ಬಾವಿ, ಆ ಮನೆಗೆ ಸೇರಿದಂತೆ ಏಳು ಬಾವಿಗಳಿವೆ. ಆ ಕಾಲದಲ್ಲಿ ನೂರಾರು ಜನ ನೆಂಟರು-ಬಂಟರು ಬೀಗರು-ಬಿಜ್ಜರು ಬರುವವರು ಹೋಗುವವರು ಅಂತ ಮನೆ ತುಂಬ ಜನರಿರುತ್ತಿದ್ದರು. ಯಾರ್ಯಾರು ಬರುತ್ತಿರೆದ್ದಾಂದು ಮನೆಯವರಿಗೆ ತಿಳಿದಿರುತ್ತದೋ ಇಲ್ಲವೋ! ? ಹಾಗೆ ಮನೆಯ ಹೊರಗೆ ತೆಂಕುಮೂಲೆಯಲ್ಲಿ ಮನೆಯ ರಕ್ಷಾದೇವತೆಯ ಸ್ಥಾನ, ಯಾರಾದರೂ ರಾತ್ರಿ ಹೊತ್ತಿನಲ್ಲಿ ಮುಸುಕು ಹಾಕಿ ಮಲಗಿದರೆ ಮುಸುಕು ಸರಿಸಿ ನೋಡುತ್ತದೆಯಂತೆ. ಮನೆಗೆಕೇಡು ಮಾಡುವವರಿದ್ದರೆ ಅಲ್ಲೇ ಕುತ್ತಿಗೆ ಹಿಸುಕಿ ಕೊಲ್ಲುತ್ತಿತ್ತಂತೆ, ಆದರೆ ಯಾರೂ ಹಾಗೆ ಸತ್ತುದು ಕೇಳಿಲ್ಲ. ಅಲ್ಲದೆ ಈ ತನಕ ದೇವರದಯುದಿಂದ ಕಳ್ಳತನ ಕೂಡ ಆಗಿಲ್ಲ.

ಕಾಶಪ್ಪಯ್ಯನವರ ಆಸ್ತಿ ಬರಿ ಕುಂದಾಪುರಪಲ್ಲ. ಅದರ ಸುತ್ತಮುತ್ತ ಇಪ್ಪತ್ತೆಂಟು ಹಳ್ಳಿಗಳವರೆಗೂ ಇತ್ತಂತೆ. ಅಂತೆಯೇ ಅವರ ವಿಳಾಸದಲ್ಲಿ ಮ. ರಾ. ರಾ. ರಾವಬಹಾದೂರ, ರಾಜೇಶ್ರೀ ಜಮೀನ್ದಾರ, ಲ್ಯಾಂಡಹೋಲ್ಡರ ಎಂಬಂತೆ ಇರುತ್ತಿತ್ತು. ಅವರ ಜಮೀನೆಲ್ಲ ಒಕ್ಕಲಬಳಿ-ಮೂಲಗೇಣಿ, ಚಾಲಗೇಣಿ ಯಡಿಯಲ್ಲಿ ಹಂಚಿಹೋಗಿತ್ತು. ವರ್ಷಂಪ್ರತಿ ಒಕ್ಕಲುಗಳು ಒಡೆಯರ ಮನೆಗೆ ಅವರ ವರು ಬೆಳೆದ ಭತ್ತ, ಕಬ್ಬು, ಕಾಯಿ, ಧಾನ್ಯವನ್ನು ಮಾತಿನಂತೆ ತಂದು ಹಾಕುತ್ತಲೂ ಇದ್ದರೂ ಉಳಿಸಿಕೊಂಡವರೂ ಇದ್ದರೂ ಹಾಗೆ ಉಳಿಸಿಕೊಂಡು ಬಂದವರಲ್ಲಿ ಕನ್ನಡ ಕುದುರಿನ ಕಾಳಿಂಗನೂ ಒಬ್ಬ.

ಕಾಳಿಂಗ ಸೋಮಾರಿ, ಮಾತಿನಲ್ಲಿ ಭಾರಿ ಜನ, ಮರದ ಮೇಲಿನ ಮಂಗವೂ ಕೈ ಬಿಡುವಂತೆ ಮಾಡಬಲ್ಲ ಜಾಣ, ಅಂತ ಯಾವೊತ್ತೂ ಒಡೆಯರಿಗೆ ಸಲ್ಲಬೇಕಾದ ಗೇಣಿ ಸಲ್ಲಿಸಿದ ದಾಖಲೆ ಇಲ್ಲ. ಆದ್ರೂ ಒಡೆಯರು ಅವ್ನಿಗೆ ಜಮೀನು ಬಿಡು ಎಂದು ಕೇಳ್ಲಿಲ್ಲ. ಕಾಶಪ್ಪಯ ಒಡೆಯರು ಗೇಣಿ ವಸೂಲಿಗೆಂತ ಒಕ್ಕಲಮನೆ ಬಾಗಿಲಿಗೆ ಹೋದವರಲ್ಲ. ಸರ್‌ಕೀಟ್‌ಗೆಂತ ಮನೆಬಿಟ್ಟು ಹೋಗಿರಬಹುದು. ಕಾಳಿಂಗಯ್ಯ ಕನ್ನಡಕುದುರಿಂದ ಕುಂದಾಪುರಕ್ಕೆ ಬಂದು ಒಡೆಯರ ಮನೆಯ ಹೆಬ್ಬಾಗಿಲ ಚಾವಡಿ ಯಲ್ಲಿ ಉಸ್ಸೆಂದು ಕುಳಿತು ದಣಿವಾರಿಸಿಕೊಳ್ಳುವ ಹೊತ್ತಿಗೆ ಮಧ್ಯಾಹ್ನವಾಗುತ್ತಿತ್ತು ಒಡೆಯರ ತೋಟದ ಕೆರೆಯಲ್ಲಿ ಮಿಂದು ಅವರ ಮನೆಯಲ್ಲಿ ಉಂಡು ಒಡೆಯರ ದರ್ಶನಕ್ಕೆ ಕಾಯುತ್ತಿರುವಾಗ ಕಾಶಪ್ಪಯ್ಯನವರು ಬರುತ್ತಿದ್ದರು. 'ಏನಾಕಾಳಿಂಗ ಬೇಸಾಯ ಎಲ್ಲ ಹೇಂಗಿತ್ತಾ ? ಮನಿಬದಿಗೆಲ್ಲಾ ಹುಷಾರಿದ್ದಾ ? ಈ ವರ್ಷ ಬೆಳೆ ಹೇಂಗೆ ? ನಿನ್ನ 'ಹಳೆಬಾಕಿ ಏನಾರು ತೀರ್ಸು ಅಂತ ಬಂದಾ' ? ಅಥ್ವಾ ಅದ್ಕಿನ್ನು ಮೂರ್ತ ಬಂದಿಲ್ವ ? ಎಂದಾಗ ಕಾಳಿಂಗ ಮಾರುದ್ದ ದೇಹಾನ್ನ ಗೇಣುದ್ದ ಮಾಡ್ಕೊಂಡು, ಇಲ್ಲದ ನಗೆ ಬರ್ಸಿಕೊಂಡು, ತಲೆ ಬಗ್ಗಿಸಿಕೊಂಡು 'ಒಡೇರೆ ಈ ವರ್ಸ ಮಳಿ ಎಲ್ಲಾ ಲ್ಯಾಕ್ ಬಂದಿತ್ತ್, ಗೊಬ್ಬರ ಬೂದಿ ಎಲ್ಲ ಹೊತ್ತಿಂದೊತ್ತಿಗೆ ಹಾಕಿತ್ತ ಕೈಂಯಿನೂ ಸೊಕ್ಕಿ ಬೆಳ್ದಿತ್ ಅಂತೆ ಕಂಡವ್ರೆಲ್ಲ ಈ ವರ್ಸ ಕಾಳಿಂಗನ್ ದೆಸಿ ಒಕ್ಕರ್ಸಿತ್ ಅಂಬೂರೇ ಆದ್ರ ಹಾಳಾದ್ ಕಷ್ಟ ಬಂದ್ ಕಾಡಾತ್ತ್‌ಕಣೆ...ಎಲ್ಲ ಆಯಿ ಕೈಗೆ ಬತ್ತಂಬೊತ್ತಿಗೆ ಉಪ್ನೀರ್ ಹೊಗಿ ನಾಚಾರ್ ಹೊಯ್ತ್ ಕಂಡ್ರ ಹೊಟ್ಟಿಗೆ ಮಣ್ ಹಾಕ್ಕಣ್ಣ ! ರಾತ್ರಿ ಬೆಳ್ಗಾಪತ್ತಿಗೆ ಅದೇನ್ ಗಾಳಿ...ಭರ್ತದ್ ನೀರ್ ಹೊಗಿ ಚಂಪನ್ಹೂರ್ ಆಯ್‌ಹೊಯ್ತು ಪುಣ್ಯ ಕೈಂಯಿ ಕೊಯ್‌ದ್ದಾಂಕಡಿರ್ನಿಲ್ಲ ಎಲ್ಲಾದ್ರೂ ಕ್ಯೊದ್ ಹಾಕಿದಿದ್ರ ಭತ್ತ ಇಳ್ದಹೊತ್ತಿಗೆ ಪೂರಾ ಕೊಚ್ಕಂಡ್ ಹೊತ್ತಿತ್ ಏನೊ ದೇವ್ರ ದೊಡ್ಡವ, ಮಕ್ಕಳಮರಿಗೆ ಗಂಜಿಗಾಪೂಷ್ಪದ್ರು ಉಳತ್ ಒಡೇರೆ ನನ್ನನಂಬಿ, ಕಾಳಿಂಗಂ ಒಂದೆನಾಲ್ಗಿ ಕಂಡವ್ರ ದುಡ್ಡಿಗೆ ಗೆಂಟಿಪಾಕಿ ಹೊಯ್ಕಂಬಯೋಚ್ನೆ ಕನ್ಸಿ ಮನ್ಸಾಗೂ ಇಲ್ಲ ಎಂಗೂ ಈ ವರ್ಸ ಹೀಂಗೆ ತೊಂದ್ರಿಯಾತನ್ನು. ಈ ನಷ್ಟ

ಮನ್ಸ್ಯಾಳಿಗೆ ಉಸಾರ ಇತ್ತಿ ಜರಾಜಾಪತ್ರಿ ಜಾಸ್ತ್ಯಾಗಿ ಕಾಲ್‌ಬಾಯ್ ರೋಗ ಪತ್ತಿ ಬಿಟ್ಟ್ಯಾಯಿ ನನ್ನ ಕತೆ ಏಳೂ ಹನ್ನೆಂದಾಯಿತ್ರು ಅಲ್ಲಿ ದೈವದ ಕಣಿಕೇಳಿದ್ರೆ ಜಕ್ಲಿಕಾಟ ಮನೆದೇವ್ರಕಾಟ ಅಂತ ಬಿತ್ತ್ ಒಟ್ಟಿ ನಾಕಿಟ್ಟಿ ಒಡೇರೆ, ಅದ್ರ ಕೊಡುದ್ ದೊಡ್ಡ ಅಲ್ಲಿ ಕೊಡೂಕಾದ್ದ ಇದ್ರ ಕಂಡಾರೂ ಹೋಯಿಬರ್ಕ ಅಂದ್ಕಂತ ಓಡಿಬಂದೆ. ನಿಮ್ಮ ಋಣ ಈ ಕಾಳಿಂಗ ಇಟ್ಕಂತಿಲ್ಲಿ ಏನಾರು ಆಯ್ಲಿ ಬಪ್ಪ ಬೇಸ್ಗೆಗಾರೂ ಒಂದ್ಸಲ ಜಳ ಜಳ ಮಾಡ್ತೆ." ಸ್ವಲ್ಪ ಹೊತ್ತು ಮೌನ "...ಹ್ಞಂ ... ಒಡೇರೆ ನಾನೀವತ್ತು ಇಲ್ಬಂದೆ. ನನ್ನ ಬಾಕುಡ್ತಿಗೆ ಜರ. ಕೆಲ್ಸಗ್ಗ್ಪುದಿಲ್ಲೆ, ಮಕ್ಳ ಮರ್ರೊತ್ತು ಒಂದ್ ನಾಕಸೇರ್ ಅಕ್ಕಿ ಕಡ ಕೊಟ್ಟಿದ್ರೆ ಆತಿತ್..."ಅಂತ ಹಲ್ಲು ಗಿಂಜಿದ... ಕಾಶಪ್ಪಯ್ಯ ಒಡೆಯರು ತಮ್ಮ ಬಲಗೈಬಂಟ ವೆಂಕಪ್ಪಯ್ಯನ್ ಕರೆದು "ಅವ್ನಿಗೆ ಏಸಂಬ್ರ ಕೊಡು" ಅಂತ ಅಂದಾಗ ವೆಂಕಪ್ಪಯ್ಯ "ಮಾತು ಮಾತು ಪ್ರಸಂಗೇಣ ಗೇಣಿ ಅಕ್ಕಿ ವಿನಶ್ಯತಿ" ಅಂತ ರಾಗ ಎಳೆಯುತ್ತ ಒಳಗೆ ಹೋದ.

ಬರಹಗಾರರಲ್ಲಿ ವಿನಂತಿ

ತಾವು ಅಪರಂಜಿಗೆ ಲೇಖನಗಳನ್ನು ಕಳುಹಿಸುವಾಗ, ಅನೇಕ ಲೇಖಕ/ಲೇಖಕಿಯರು ಸ್ವ- ವಿಳಾಸವಿರುವ, ಅಂಚೆ ಚೀಟಿ ಹಚ್ಚಿರುವ ಲಕ್ಕೋಟೆಗಳನ್ನು ಲೇಖನಗಳೊಂದಿಗೆ ಕಳುಹಿಸುತ್ತಾರೆ. ಲೇಖನ ಸ್ವೀಕೃತವಾಗದಿದ್ದಲ್ಲಿ ಅದು ಹಿಂದಕ್ಕೆ ಬರಲಿ ಎಂಬುದು ಇದರ ಉದ್ದೇಶ. ನಮ್ಮ ಪೇಚಾಟ ಏನೆಂದರೆ ಮೂರು ನಾಲ್ಕು ತಿಂಗಳುಗಳಿಗಾಗುವಷ್ಟು ಬರಹಗಳು ನಮ್ಮ ದಾಸ್ತಾನಿನಲ್ಲಿ ಇರುವ ಕಾರಣ, ಹೊಸದಾಗಿ ಬಂದ ಲೇಖನವನ್ನು ಓದಿ, ಅಂದೇ ನಿರ್ಧಾರ ತೆಗೆದುಕೊಳ್ಳುವ ವ್ಯವಧಾನ ಇಲ್ಲದಿರುವುದು. ಹಾಗಾಗಿ ಮಾನ್ಯ ಲೇಖಕರು ಖಂಡಿತ ಸ್ಟ್ಯಾಂಪ್ ಹಚ್ಚಿದ ಲಕ್ಕೋಟೆಗಳನ್ನು ಕಳುಹಿಸಬೇಡಿ ಅದೇ ಖರ್ಚಿನಲ್ಲಿ ನಿಮ್ಮ ಲೇಖನದ ಒಂದು ಜೆರಾಕ್ಸ್ ಪ್ರತಿ ತೆಗೆದಿಟ್ಟುಕೊಂಡರೆ ಒಳಿತು ವಿಶ್ವಾಸ ಎಂದಿನಂತಿರಲಿ.

ಶಿವಕುಮಾರ್
ಸಂಪಾದಕ

ಜಂಬಲ್ಸ್‌ಗೆ ಸರಿಯುತ್ತರ : ಕಲಬೆರಕೆ; ಚಿಪ್ಪುಹಿಡಿ, ಬಕ್ಕತಲೆ,
— ಬೆಪ್ಪು ತಕ್ಕಡಿ —

ಹಬ್ಬದ ಉಡುಗೊರೆ

ಹಬ್ಬ ಸಾಲು ಪ್ರಾರಂಭವಾಗಲಿದೆ. ಬಂಧು ಮಿತ್ರರಿಗೆ ಒಂದು ಉಡುಗೊರ ಆರಿಸುವ ಸನ್ನಾಹದಲ್ಲಿ ನೀವಿದ್ದರೆ, ನಮ್ಮದೊಂದು ಸಲಹೆ. ನಿಮ್ಮ ಮಿತ್ರರಿಗೆ ಅಪರಂಜಿಯ ಸದಸ್ಯತ್ವವನ್ನು ಬಳುವಳಿಯಾಗಿ ಏಕೆ ನೀಡಬಾರದು ? ಈ ಕೆಲಸ ಬಹು ಸುಲಭ. ಕೆಳಗಿನ ಫಾರಂಅನ್ನು ತುಂಬಿ, ಸೂಕ್ತ ಚೆಕ್‌ನೊಂದಿಗೆ ನಮಗೆ ತಲುಪಿಸಿ, ಒಂದು ಒಳ್ಳೆಯ ವಿನ್ಯಾಸದ ಗ್ರೀಟಿಂಗ್‌ನೊಂದಿಗೆ ಅಪರಂಜಿಯ ಯುಗಾದಿ ಸಂಚಿಕೆಯನ್ನು ನಿಮ್ಮ ಬಂಧು ಮಿತ್ರರಿಗೆ ರವಾನಿಸುತ್ತೇವೆ. ಅನಂತರ ಚಂದಾ ಅವಧಿಗನುಸಾರವಾಗಿ, ಪ್ರತಿ ತಿಂಗಳೂ ನಿಮ್ಮ ನೆನಪು ಅಪರಂಜಿಯ ತಿಳಿನಗೆಯ ಮೂಲಕ ಅವರಿಗೆ ತಲುಪುತ್ತದೆ. ಯುಗಾದಿ ಹಬ್ಬಕ್ಕೆ ಮಾತ್ರವಲ್ಲ ದೀಪಾವಳಿ, ಹುಟ್ಟುಹಬ್ಬ. ಮದುವೆಯ ವಾರ್ಷಿಕೋತ್ಸವ ಹೀಗೆ ಯಾವ ಸಂದರ್ಭಕ್ಕಾದರೂ ನೀವು ಈ ಅಪರಂಜಿ ಉಡುಗೊರೆಯನ್ನು ಕಳಿಸಬಹುದು. ತ್ವರೆಮಾಡಿ, ನಗೆ ಸಂಸ್ಕೃತಿಯನ್ನು ಹರಡಿ.

–ಶಿವಕುಮಾರ್

ಅಪರಂಜಿಯ ಉಡುಗೊರೆಯನ್ನು ನಮ್ಮ ಮಿತ್ರರಿಗೆ ಕಳುಹಿಸಲು ಉತ್ಸುಕರಾಗಿದ್ದೇವೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಸಂಚಿಕೆಯನ್ನು ಕಳುಹಿಸಿ, ಚೆಕ್ ಅನ್ನು ಈ ಫಾರಂನೊಂದಿಗೆ ಇರಿಸಿದ್ದೇನೆ.

ಸಹಿ

ಸಂಚಿಕೆಯನ್ನು ಇವರಿಗೆ ಉಡುಗೊರೆಯಾಗಿ ಕಳುಹಿಸಿ :

....

☐ ವಾರ್ಷಿಕ ಚಂದಾ ರೂ 25/-

....

☐ ಆಜೀವ ಚಂದಾ ರೂ 250/-

....

ರ ಚೆಕ್ಕನ್ನು ಈ ಫಾರಂನೊಂದಿಗೆ ಲಗತ್ತಿಸಿದೆ.

ಚೆಕ್ ನಂ............................ಬ್ಯಾಂಕ್...............................

(ಬೆಂಗಳೂರು ಹೊರಗಿನ ಚೆಕ್‌ಗಳಿಗೆ ಸೂಕ್ತ ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಿ)

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.